ಜೆಎಸ್‌ಎಸ್ ಮಾಸಪತ್ರಿಕೆ

ಜೆಎಸ್‌ಎಸ್ ಮಹಾವಿದ್ಯಾಪೀಠದ ವಾರ್ತಾಪತ್ರ

ಸಂಚಿಕೆ 78-79 **ಮೇ-ಜೂನ್ 2009**

ಸುತ್ತೂರಿನ ಉಚಿತ ಶಾಲೆಯ ಬಾಲಕಿಯರ ವಿದ್ಯಾರ್ಥಿನಿಲಯದ ಕಟ್ಟಡ ಮತ್ತು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ರಜತಮಹೋತ್ಸವ ವಿಚಾರಸಂಕಿರಣವನ್ನು ರಾಷ್ಟ್ರಪತಿ ಶ್ರೀಮತಿ ಪ್ರತಿಭಾ ದೇವಿಸಿಂಗ್ ಪಾಟೀಲ್ ಉದ್ಘಾಟಿಸುತ್ತಿದ್ದಾರೆ. ಚಿತ್ರದಲ್ಲಿ ಶ್ರೀಮತಿ ಶೋಭಾ ಕರಂದ್ಲಾಜೆ, ಪೂಜ್ಯ ಶ್ರೀಗಳವರು, ಪೂಜ್ಯ ಶ್ರೀಗಳು, ಸಿದ್ಧಗಂಗಾ, ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಸಿದ್ಧರಾಮಯ್ಯ, ಶ್ರೀ ಬಿ.ಎನ್. ಬೆಟ್‌ಕೆರೂರ್ ಮತ್ತು ಡಾ. ಬಿ. ಸುರೇಶ್

ಆರೋಗ್ಯ ಸೇವೆ ಗ್ರಾಮೀಣರಿಗೂ ದೊರೆಯುವಂತಾಗಲಿ : ರಾಷ್ಟ್ರಪತಿ

"ಗ್ರಾಮೀಣ ಅಭಿವೃದ್ಧಿ ಮತ್ತು ಆರೋಗ್ಯ ಸೌಲಭ್ಯಗಳು ನಮ್ಮ ಎಲ್ಲ ಗ್ರಾಮಗಳಿಗೂ ತಲುಪುವಂತೆ ಮಾಡಲು ರಾಷ್ಟ್ರೀಯ ಮಟ್ಟದಲ್ಲಿ ಸೂಕ್ತ ಕ್ರಮ ಹಾಗೂ ಸತತ ಪ್ರಯತ್ನ ಕೈಗೊಳ್ಳಬೇಕಾದುದು ಇಂದಿನ ಆದ್ಯತೆಯಾಗಿದೆ" ಎಂದು ರಾಷ್ಟ್ರಪತಿ ಶ್ರೀಮತಿ ಪ್ರತಿಭಾ ದೇವಿಸಿಂಗ್ ಪಾಟೀಲ್ ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಉಚಿತ ಶಾಲೆಯ ಬಾಲಕಿಯರ ವಿದ್ಯಾರ್ಥಿನಿಲಯದ ಕಟ್ಟಡ ಮತ್ತು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ರಜತಮಹೋತ್ಸವದ ಅಂಗವಾಗಿ "ಸಮರ್ಥ ಗ್ರಾಮೀಣ ಆರೋಗ್ಯಾಭಿವೃದ್ಧಿ" ವಿಚಾರಸಂಕಿರಣವನ್ನು ದಿನಾಂಕ 9.5.2009 ರಂದು ಸುತ್ತೂರು ಶ್ರೀಕ್ಷೇತ್ರದ ಶಾಲಾ ಆವರಣದಲ್ಲಿ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮುಂದುವರಿದು ಅವರು "ಸ್ವಾತಂತ್ರ್ಯಾನಂತರ ಭಾರತವು ಆರೋಗ್ಯ ಕ್ಷೇತ್ರದಲ್ಲಿ ಹಲವಾರು ಸಾಧನೆಗಳನ್ನು ಮಾಡಿದ್ದು, ಅವುಗಳಿಂದ ಜನರ ಆಯುಷ್ಯ ವೃದ್ಧಿ ಮತ್ತು ಮಾರಕ ಖಾಯಿಲೆಗಳ ನಿರ್ಮೂಲನ ಕಾರ್ಯವು ನಡೆಯುತ್ತಿರುವುದು ಸಂತೋಷದ ಸಂಗತಿ. ಪರಿಪೂರ್ಣ ಆರೋಗ್ಯ ರಕ್ಷಣೆ ಎಲ್ಲರ ಹಕ್ಕಾದರೂ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಸೌಲಭ್ಯವಂಚಿತ ಸಮಾಜಕ್ಕೆ ವೈದ್ಯಕೀಯ ಸೌಲಭ್ಯಗಳು ದೊರೆಯುವುದು ಅಷ್ಟು ಸುಲಭವಾಗಿಲ್ಲ. ಈ ಪರಿಸ್ಥಿತಿ ಶೀಘ್ರವೇ ಬದಲಾವಣೆ ಯಾಗಬೇಕು" ಎಂದು ಅವರು ಕಳಕಳಿ ವ್ಯಕ್ತಪಡಿಸಿದರು.

ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಮತ್ತು ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ರಾಜ್ಯಪಾಲರಾದ ಶ್ರೀ ರಾಮೇಶ್ವರ ಠಾಕೂರ್, ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ, ಜಿಲ್ಲಾ ಉಸ್ತುವಾರಿ ಸಚಿವೆ ಕುಮಾರಿ ಶೋಭಾ ಕರಂದ್ಲಾಜೆ ಮತ್ತು ಶಾಸಕ ಶ್ರೀ ಸಿದ್ಧರಾಮಯ್ಯ, ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಬಿ. ಸುರೇಶ್ ಮುಂತಾದವರು ಉಪಸ್ಥಿತರಿದ್ದರು.

ಜೆಎಸ್‌ಎಸ್ ಕಾಲೇಜು, ನಂಜನಗೂಡು

ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಆಶ್ರಯದಲ್ಲಿ 'ಬ್ಯಾಂಕುಗಳಲ್ಲಿ ತಾಂತ್ರಿಕ ಬೆಳವಣಿಗೆ' ವಿಷಯ ಕುರಿತು 11.4.2009 ರಂದು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಸ್. ರತ್ನಶೇಖರರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮೈಸೂರಿನ ಬಂಬೂಬಜಾರ್‌ನಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸೇವಾ ಶಾಖೆಯ ಮುಖ್ಯ ವ್ಯವಸ್ಥಾಪಕರಾದ ಶ್ರೀ ಕೆ.ಪಿ. ಪ್ರದ್ಯುಮ್ನರವರು ಭಾಷಣಕಾರರಾಗಿ ಆಗಮಿಸಿದ್ದರು. ಅವರು ತಮ್ಮ ಉಪನ್ಯಾಸದಲ್ಲಿ ಬ್ಯಾಂಕುಗಳ ಸ್ವರೂಪ, ಬ್ಯಾಂಕುಗಳು ಈ ಹಿಂದೆ ಬಡ್ಡಿಯನ್ನು ಲೆಕ್ಕಾಚಾರ ಹಾಕುತ್ತಿದ್ದ ರೀತಿ, ಈಚೆಗೆ ಅದರಲ್ಲಾಗಿರುವ ಬದಲಾವಣೆಗಳು ಇವುಗಳನ್ನು ಎಳೆಎಳೆಯಾಗಿ ವಿವರಿಸಿದರು. ಕಂಪ್ಯೂಟರೀಕರಣವಾದ ಬಳಿಕ ಬ್ಯಾಂಕಿಂಗ್ ಸೇವೆಗಳು ಹೇಗೆ ವಿಸ್ತಾರಗೊಂಡಿವೆ ಎಂಬುದನ್ನು ತಿಳಿಸುತ್ತಾ, ಎ.ಟಿ.ಎಂ. ವ್ಯವಸ್ಥೆ ಮತ್ತು ಇತರ ಉಪಯೋಗಗಳ ಬಗೆಗೆ ವಿದ್ಯಾರ್ಥಿಗಳಿಗೆ ಸಾಕಷ್ಟು ಮಾಹಿತಿ ನೀಡಿದರು. ಅಂತರ್ಜಾಲ ಸೇವೆಯ ಪ್ರಕಾರಗಳು, ಕ್ರೆಡಿಟ್ ಕಾರ್ಡು, ಡೆಬಿಟ್ ಕಾರ್ಡು, ಇ-ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್ ಇತ್ಯಾದಿಗಳ ಬಗ್ಗೆಯೂ ಅವರು ಸಾಕಷ್ಟು ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಉಪನ್ಯಾಸದ ನಂತರ ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ನೀಡಿದರು.

ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಆರ್. ಗುಡ್ಡಪ್ಪನವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕು. ಎನ್. ಎಸ್. ಯಶೋದರವರು ಪ್ರಾರ್ಥನೆ ಮಾಡಿದರೆ, ಕು. ಎಸ್. ಸವಿತಾ ಸ್ವಾಗತಿಸಿದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿಯವರು ಭಾಷಣಕಾರರ ಪರಿಚಯವನ್ನು ಮಾಡಿದರು. ವಿದ್ಯಾರ್ಥಿಗಳಾದ ಶ್ರೀ ಡಿ.ಬಿ. ಶಿವಕುಮಾರ್ ವಂದನಾರ್ಪಣೆ ಮಾಡಿದರೆ, ಕು. ಎ. ರಜನಿ ಕಾರ್ಯಕ್ರಮವನ್ನು ನಿರೂಪಿಸಿದರು.

***

ಕಾಲೇಜಿನಲ್ಲಿ ದಿನಾಂಕ 18.4.2009 ರಂದು ನಡೆದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಹಾಗೂ ವಾರ್ಷಿಕ ಸಂಚಿಕೆ 'ಕೂಜನ' ಬಿಡುಗಡೆ ಸಮಾರಂಭದಲ್ಲಿ ಸಂಚಿಕೆಯನ್ನು ಬಿಡುಗಡೆ ಮಾಡಿದ ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ಘಟಕದ ಅಧ್ಯಕ್ಷರಾದ ಶ್ರೀ ಗೊ.ರು. ಪರಮೇಶ್ವರಪ್ಪನವರು "ಸಂಚಿಕೆಯ ಲೇಖನಗಳ ಗುಣಮಟ್ಟ ಉತ್ತಮವಾಗಿದೆ, ಮುಖಪುಟದ ವಿನ್ಯಾಸ ಅಂತಾರಾಷ್ಟ್ರೀಯ ಮಟ್ಟದ ಸಂಚಿಕೆಗಳನ್ನು ನೆನಪಿಗೆ ತರುತ್ತಿದೆ" ಎಂದು ಮೆಚ್ಚುಗೆಯ ಮಾತುಗಳನ್ನಾಡಿದರು. "ಮನುಷ್ಯ ಸಂಸಾರದೊಡನೆ, ಸಹಚರರೊಡನೆ, ಸಮಾಜದೊಡನೆ ಉತ್ತಮ ಸಂಬಂಧವನ್ನಿಟ್ಟುಕೊಳ್ಳಬೇಕು. ಅಂತಹವರು ಮಾತ್ರ ಸಮಾಜದಲ್ಲಿ ಸಹೃದಯಸಂಪನ್ನ ನಾಗರಿಕರಾಗಲು ಸಾಧ್ಯ. ಪ್ರತಿ ತಾಯಿಯ ಹೃದಯದಲ್ಲಿರಬಹುದಾದ ರಾಷ್ಟ್ರಪ್ರೇಮದಿಂದ ದೇಶಕ್ಕೆ ದೇಶಭಕ್ತರನ್ನು ನೀಡುವ ಪ್ರೇರಣೆ ಸಿಗುತ್ತದೆ. ಪ್ರತಿ ಕೂಲಿಯವನ ಶ್ರಮ ರಾಷ್ಟ್ರ ಕಟ್ಟುವ ಪ್ರಥಮ ಮೆಟ್ಟಿಲೆಂಬುದನ್ನು ತಿಳಿಸಿ, ಕಾಯಕದ ಮಹತ್ವವನ್ನು ವಿದ್ಯಾರ್ಥಿಗಳಿಗೆ ಮನಗಾಣಿಸಿದರು. ಗಂಧದಂತೆ ನಮ್ಮ ಬದುಕು ಸಾಗಬೇಕು, ಸವೆಯಬೇಕು, ಅದರಿಂದ ಪ್ರಸರಿಸಿದ ಸುಗಂಧದಿಂದ ಭವ್ಯ ಭಾರತದ ನಿರ್ಮಾಣಕ್ಕೆ ಬೇಕಾದ ಸುಭದ್ರ ಸುಸಂಸ್ಕೃತ ಸಮಾಜ ನಿರ್ಮಿತವಾಗುತ್ತದೆ" ಎಂದರು.

ಸಮಾರೋಪ ಭಾಷಣ ಮಾಡಿದ ಮಡಿಕೇರಿ ಆಕಾಶವಾಣಿಯ ಕಾರ್ಯಕ್ರಮ ನಿರ್ವಾಹಕರಾದ ಶ್ರೀ ಜಿ.ಕೆ. ರವೀಂದ್ರಕುಮಾರ್ ರವರು ಸಮಾಜವು ಪರಿಭಾವಿಸಿದ ಹದದಲ್ಲಿ ನಿಮ್ಮ ಜೀವನ ರೂಪಿತವಾಗಲಿ, ನೀವು ಪಡೆಯುವ ಪದವಿಯ ಗುಣಾತ್ಮಕತೆ ಉತ್ಕೃಷ್ಟವಾದುದಾಗಲಿ, ಭರವಸೆಯ ಬೆಳಕಿನಲ್ಲಿ ನಿಮ್ಮೆಲ್ಲರ ಬದುಕು ಸಾಗಲೆಂದರು. ಒಳ್ಳೆಯ ಬದುಕು ಆತ್ಮವಿಶ್ವಾಸವನ್ನು, ಭರವಸೆಯನ್ನು ಸೃಷ್ಟಿಸುತ್ತದೆ. ಒಳ್ಳೆಯ ಬದುಕಿನ ಕವಾಟ ತೆರೆಯುತ್ತದೆ. ಓದಿನ ಜೊತೆಗೆ ಭವಿಷ್ಯ ನಿರ್ಮಾಣದ ಬಗೆಗೂ ಗಮನವಿರಲಿ. ಅಕ್ಷರಸ್ಥ ಹಾಗೂ ಅನಕ್ಷರಸ್ಥರ ವ್ಯತ್ಯಾಸದ ಸ್ವರೂಪವನ್ನು ವಿವರಿಸಿದ ಅವರು ವಿದ್ಯಾರ್ಥಿಗಳು ತಮ್ಮ ಓದಿನ ಜೊತೆಗೆ ವ್ಯಕ್ತಿಗತವಾದ ಕಲೆ, ಕೌಶಲಗಳನ್ನು ಬೆಳೆಸಿಕೊಳ್ಳಬೇಕೆಂದರು. ಜೀವನದಲ್ಲಿ ಸಹನೆ ಮುಖ್ಯ. ಯುವ ಸಮಾಜ ತಾಯ್ನಾಡಿಗೆ ತಮ್ಮ ಕಾಣಿಕೆ ನೀಡಿ ಕೃತಾರ್ಥರಾಗಬೇಕು. ಕುಂದಿಲ್ಲದ ನಿರ್ಮಲ ಬದುಕಿಗೆ ಹಂಬಲಿಸುವ ಗ್ರಾಮೀಣ ವಿದ್ಯಾರ್ಥಿಗಳ ಬದುಕು ಅರಳಲೆಂದು ಹಾರೈಸಿದರು. ಕಾಲೇಜಿನ ಸಂಚಿಕೆ 'ಕೂಜನ'ದ ಬಗ್ಗೆ ಮೆಚ್ಚುಗೆ ಸೂಚಿಸಿದ ಅವರು ಅದರಲ್ಲಿ ಸಂಪಾದಕರ ಶ್ರಮ, ವಿದ್ಯಾರ್ಥಿಗಳ ಚಿಂತನಾಕ್ರಮ, ಪ್ರಾಚಾರ್ಯರು ಹಾಗೂ ಉಪನ್ಯಾಸಕ ವೃಂದದ ಸಹಕಾರ ಸ್ಪಷ್ಟವಾಗಿ ಗೋಚರಿಸುತ್ತಿದೆ ಎಂದು ಪ್ರಶಂಸಿಸಿದರು.

ವೇದಿಕೆಯಲ್ಲಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎ.ಪಿ. ಮಹದೇವಪ್ಪನವರು, ಸಾಂಸ್ಕೃತಿಕ ವೇದಿಕೆಯ ಸಂಚಾಲಕರಾದ ಪ್ರೊ. ಸಿ.ವಿ. ಬಸವರಾಜು, 'ಕೂಜನ' ಸಂಚಿಕೆಯ ಸಂಪಾದಕರಾದ ಪ್ರೊ. ಎಂ.ಸಿ. ಸರೋಜಮ್ಮಣ್ಣಿಯವರು ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಸಿ. ಪಳನಿಸ್ವಾಮಿಯವರು ಉಪಸ್ಥಿತರಿದ್ದರು. ಸಾಂಸ್ಕೃತಿಕ ಹಾಗೂ ಕ್ರೀಡಾಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

□

ಗ್ರಾಮೀಣ ಎಳೆಯರ ಮೇಳ

ಸುತ್ತೂರಿನಲ್ಲಿ ದಿನಾಂಕ 8.4.2009 ರಂದು ಗ್ರಾಮೀಣ ಎಳೆಯರ ಮೇಳವನ್ನು ಖ್ಯಾತ ಚಲನಚಿತ್ರ ಕಲಾವಿದರಾದ ಶ್ರೀ ಮಂಡ್ಯ ರಮೇಶ್‌ರವರು ಉದ್ಘಾಟಿಸಿ ಮಾತನಾಡುತ್ತ "ಅಲ್ಲಮರ 'ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯ' ಎಂಬ ವಚನದಂತೆ 'ಎತ್ತಣ ಸುತ್ತೂರು ಶ್ರೀಕ್ಷೇತ್ರ ಎತ್ತಣ ಮೇಘಾಲಯ'! ಶ್ರೀಗಳವರ ದೂರದೃಷ್ಟಿ ಹಾಗೂ ಮಕ್ಕಳ ಬಗ್ಗೆ ಅವರಿಗಿರುವ ಪ್ರೀತಿಯ ಫಲವಾಗಿ ಮೇಘಾಲಯದ ಮಕ್ಕಳು ಇಲ್ಲಿನ ಎಳೆಯರ ಮೇಳದ ಶಿಬಿರದಲ್ಲಿ ಭಾಗವಹಿಸಿ ನಮ್ಮ ಸಂಸ್ಕೃತಿಯ ಜೊತೆಗೆ ಅವರ ಸಂಸ್ಕೃತಿಯ ಕಂಪನ್ನೂ ಪಂಚಯಿಸಲಿದ್ದು, ಬೇರೆ ಯಾವುದೇ ಎಳೆಯರ ಮೇಳಕ್ಕಿಂತ ಇದು ವಿಶೇಷವಾಗಿದೆ" ಎಂದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸುಗಮ ಸಂಗೀತ ಕಲಾವಿದೆ ಶ್ರೀಮತಿ ಶಾಂತಲ ಜಗದೀಶ್‌ರವರು ಮಾತನಾಡಿ, ಸೌಲಭ್ಯಗಳಿಂದ ವಂಚಿತರಾದ ಗ್ರಾಮೀಣ ಮಕ್ಕಳಿಗಾಗಿ ಆಯೋಜಿಸಿರುವ ಇಂಥ ಶಿಬಿರ ಹೆಚ್ಚು ಅರ್ಥಪೂರ್ಣ ವೆಂದರು. ಕಾರ್ಯಕ್ರಮದ ಕೊನೆಯಲ್ಲಿ ಭಾವಗೀತೆಗಳನ್ನು ಹಾಡಿ, ಅವರು ಮಕ್ಕಳನ್ನು ರಂಜಿಸಿದರು.

ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯದಲ್ಲಿರುವ ಶ್ರೀ ಮಹಾವಿದ್ಯಾಗಣಪತಿ ದೇವಸ್ಥಾನದಲ್ಲಿ ದಿನಾಂಕ 27.4.2009 ರಂದು 22ನೇ ವಾರ್ಷಿಕೋತ್ಸವ ಮತ್ತು ಮಹಾಗಣಪತಿ ಹೋಮವನ್ನು ಭಕ್ತಿ, ಶ್ರದ್ಧೆ, ವಿಜೃಂಭಣೆಗಳಿಂದ ಆಚರಿಸಲಾಯಿತು.

ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿ ಗಳಾದ ಪ್ರೊ. ಸಿ. ಸುಬ್ಬಣ್ಣನವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತ "ವರ್ಷವಿಡೀ ವಿದ್ಯಾಭ್ಯಾಸದಲ್ಲಿ ತೊಡಗುವ ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಾದ ಚಿತ್ರಕಲೆ, ಬಿದಿರಿನ ಕಲೆ, ಟೆರಕೋಟ, ಪೇಪರ್ ಕ್ರಾಫ್ಟ್ ಮುಂತಾದುವುಗಳನ್ನು ಕಲಿಯಲು ಈ ಎಳೆಯರ ಮೇಳವು ಉತ್ತಮ ವೇದಿಕೆಯಾಗಿದೆ. ಸುತ್ತಮುತ್ತಲಿನ ಮಕ್ಕಳು ಈ ಶಿಬಿರದಲ್ಲಿ ಪಾಲ್ಗೊಂಡಿರುವುದು ಸಂತೋಷದ ವಿಷಯವಾಗಿದೆ" ಎಂದರು.

ಕಾರ್ಯಕ್ರಮದಲ್ಲಿ ಸುತ್ತೂರು ಸಂಸ್ಥೆಗಳ ಎಲ್ಲಾ ಮುಖ್ಯಸ್ಥರುಗಳು ಪಾಲ್ಗೊಂಡಿದ್ದರು. ಶ್ರೀ ಎಚ್.ಎನ್. ಮಂಜುನಾಥ್‌ರವರು ಸ್ವಾಗತಿಸಿದರೆ, ಶ್ರೀ ನಾಗೇಂದ್ರರವರು ವಂದನಾರ್ಪಣೆ ಮಾಡಿದರು. ಶ್ರೀ ಡಿ.ಎಂ. ಸಿದ್ಧಲಿಂಗಸ್ವಾಮಿ ಯವರು ಕಾರ್ಯಕ್ರಮವನ್ನು ನಿರೂಪಿಸಿದರು.

ಬೆಳದಿಂಗಳ ಸಂಗೀತ

7.7.2009 ಮಂಗಳವಾರ ಸಂಜೆ 6.00

ಗಾಯನ

ವಿದುಷಿ ಪ್ರಾರ್ಥನಾ ಸಾಯಿ ನರಸಿಂಹನ್

ಚೆನ್ನೈ

ಸ್ಥಳ : ಶ್ರೀ ಸುತ್ತೂರು ಮಠ
(ಮೈಸೂರು ಶಾಖೆ), ಮೈಸೂರು

ಸುತ್ತೂರು ಶ್ರೀಕ್ಷೇತ್ರದಲ್ಲಿ ಸಾಮೂಹಿಕ ವಿವಾಹ

ಸುತ್ತೂರು ಶ್ರೀಮಠದ ವತಿಯಿಂದ ಆಯೋಜಿಸಿದ್ದ ನಾಲ್ಕನೆಯ ತಿಂಗಳ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮೂರು ಜೋಡಿಗಳು ಹೊಸ ಬಾಳಿಗೆ ನಾಂದಿ ಹಾಡಿದರು.

ಜಗದ್ಗುರು ಶ್ರೀ ಮಂತ್ರಮಹರ್ಷಿ ಶಿವರಾತ್ರಿ ಮಹಾಸ್ವಾಮಿಗಳವರ 124 ನೆಯ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ನಡೆದ ಈ ಸಾಮೂಹಿಕ ವಿವಾಹ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಚನ ನೀಡುತ್ತಾ "ವಿವಾಹವೆನ್ನುವುದು ಪವಿತ್ರವಾದುದು. ವೈವಾಹಿಕ ಬದುಕೆಂದರೆ ಹೆಣ್ಣು ಗಂಡುಗಳ ಬಾಂಧವ್ಯವಷ್ಟೇ ಅಲ್ಲ, ವಿವಾಹಿತನು ತನ್ನನ್ನು ಅವಲಂಬಿಸಿರುವವರನ್ನೆಲ್ಲಾ ಸಾಕುವ ಕೈಂಕರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಜೀವನದಲ್ಲಿ ಬರುವ ಸುಖದುಃಖಗಳನ್ನು ಸಮಾನವಾಗಿ ಸ್ವೀಕರಿಸಿ, ಅನ್ಯೋನ್ಯವಾಗಿ ಬದುಕು ನಡೆಸುವುದೇ ಮುಖ್ಯ" ಎಂದರು. ಶ್ರೀಮಂತರಂತೆ ಸಾಲ ಸೋಲ ಮಾಡಿ ವಿವಾಹವಾಗುವ ಬದಲು ಎಲ್ಲಿ ಅನುಕೂಲತೆ ಇರುತ್ತದೆಯೋ ಅಲ್ಲಿ ಸರಳವಾಗಿ ವಿವಾಹವಾಗುವ ಮೂಲಕ ಸುಂದರ ಬದುಕನ್ನು ಕಟ್ಟಿಕೊಳ್ಳಬೇಕೆಂದು ಕರೆ ನೀಡಿದರು.

ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹಮಠದ ಅಧ್ಯಕ್ಷರಾದ ಶ್ರೀ ಮಹಾಂತಸ್ವಾಮಿಗಳು ಮಾತನಾಡಿ, ದುಂದು ವೆಚ್ಚದ ಮದುವೆ ಮಾಡಿಕೊಂಡು ಸಂಕಷ್ಟದ ಬದುಕು ನಡೆಸುವ ಬದಲು ಇಂತಹ ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಕಡಿಮೆ ಖರ್ಚಿನಲ್ಲಿ ವಿವಾಹವಾಗುವ ಮೂಲಕ ಉತ್ತಮ ಬದುಕನ್ನು ರೂಪಿಸಿಕೊಳ್ಳುವಂತೆ ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕಲ್ಮಠದ ಶ್ರೀ ಚಂದ್ರಶೇಖರ ಸ್ವಾಮಿಗಳವರು ಮಾತನಾಡಿ, ನಿಷ್ಠೆ, ಕಾಯಕತತ್ವ ಮೊದಲಾದ ಮೌಲ್ಯಗಳು ಮಾನವನನ್ನು ಸನ್ಮಾರ್ಗದಲ್ಲಿ ನಡೆಸುವ ಮೂಲಕ ಜನಸಾಮಾನ್ಯರ ಬದುಕನ್ನು ಹಸನುಗೊಳಿಸುತ್ತವೆ ಎಂದರು. ಮಕ್ಕಳ ಮದುವೆಗಳಿಗೆ ಹೆತ್ತವರು ಅದ್ದೂರಿ ವೆಚ್ಚ ಮಾಡಿ, ಮನೆ-ಮಠ ಹಾಳುಮಾಡಿಕೊಳ್ಳುವುದನ್ನು ಬಿಟ್ಟು ಇಂತಹ ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಮದುವೆ ಮಾಡಿಕೊಂಡು ಶ್ರೀಗಳ ಆಶೀರ್ವಾದ ಪಡೆಯುವುದು ಒಂದು ಭಾಗ್ಯವೆಂದು ಬಣ್ಣಿಸಿದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದುಗ್ಗಹಟ್ಟಿಯ ಶ್ರೀ ಪಿ. ವೀರಭದ್ರಪ್ಪನವರು ಮಾತನಾಡಿ, ಶ್ರೀಕ್ಷೇತ್ರದಲ್ಲಿ ಪ್ರತಿ ತಿಂಗಳೂ ನಡೆಯುತ್ತಿರುವ ಸಾಮೂಹಿಕ ವಿವಾಹದಲ್ಲಿ ಲಗ್ನವಾದವರು ಪುಣ್ಯ ಮಾಡಿದವರು. ಅದ್ದೂರಿ ವಿವಾಹ ಮಾಡಿಕೊಂಡು ಸಂಕಷ್ಟಕ್ಕೆ ಸಿಲುಕದೆ, ಮೂಢನಂಬಿಕೆಗಳನ್ನು ಬಿಟ್ಟು ಅನಾವಶ್ಯಕ ಖರ್ಚುಗಳನ್ನು ಕಡಿಮೆ ಮಾಡಿಕೊಂಡು ಅದೇ ಹಣವನ್ನು ಮುಂದಿನ ಜೀವನೋಪಾಯಕ್ಕೆ ಬಳಸಿಕೊಳ್ಳುವಂತೆ ಹಿತವಚನ ನುಡಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಉಡಿಗಾಲದ ಶ್ರೀ ಕುಮಾರಸ್ವಾಮಿಯವರು, ಗ್ರಾಮೀಣ ಜನರ ಕಷ್ಟಸುಖಗಳನ್ನು ಚೆನ್ನಾಗಿ ಬಲ್ಲ ಸುತ್ತೂರು ಶ್ರೀಗಳು ಅವರುಗಳ ಸಂಕಷ್ಟವನ್ನು ಹೋಗಲಾಡಿಸುವ ಸಲುವಾಗಿ, ಸುತ್ತೂರು ಜಾತ್ರೆಯ ಸಂದರ್ಭದಲ್ಲಿ ನಡೆಯುತ್ತಿದ್ದ ಸಾಮೂಹಿಕ ವಿವಾಹವನ್ನು ಪ್ರತಿ ತಿಂಗಳೂ ನಡೆಸುವ ಮೂಲಕ ಜನಕಲ್ಯಾಣದ ಕೆಲಸ ಮಾಡುತ್ತಿದ್ದಾರೆಂದರು.

ವೇದಿಕೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಉಪ ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಕುಮಾರಸ್ವಾಮಿ, ಪಡುವಲ ಮಠದ ಶ್ರೀ ಮಹಾದೇವಸ್ವಾಮಿ, ಮಾಜಿ ಮೇಯರ್ ಶ್ರೀ ದಕ್ಷಿಣಾಮೂರ್ತಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀ ಕೆ.ಎನ್. ಪುಟ್ಟಬುದ್ಧಿ, ಮಾಜಿ ಸದಸ್ಯರಾದ ಕಲ್ಮಳ್ಳಿ ಶ್ರೀ ಶಿವಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

ಪ್ರತಿ ತಿಂಗಳೂ ನಡೆಯಲಿರುವ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮದ ಬಗೆಗೆ ಸಂಯೋಜನಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ನೇರವಾಗಿ ಸಂಪರ್ಕಿಸಬಹುದು ಅಥವಾ **08221-232217, 232033, 232044** ದೂರವಾಣಿಗಳಲ್ಲಿ ಮಾಹಿತಿ ಪಡೆದು ನೋಂದಣಿ ಮಾಡಿಸಿಕೊಳ್ಳಬಹುದು.

ಕಂಡುಕೊಂಡಿದ್ದಾರೆ ಎಂದರು. ಕೃಷಿಕರು ಕಡಿಮೆ ಖರ್ಚು ಮಾಡಿ ಹೆಚ್ಚು ಆದಾಯ ತಂದುಕೊಡುವಂಥ ಬೆಳೆಗಳನ್ನು ಬೆಳೆಯ ಬೇಕೆಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದ ನಿರ್ದೇಶಕರಾದ ಡಾ. ವಿ. ಪ್ರಕಾಶ್‌ರವರು, ಪೌಷ್ಟಿಕಾಂಶದ ಬಗ್ಗೆ ಹದಿಹರೆಯದ ಹುಡುಗಿಗೆ ತಿಳಿವಳಿಕೆ ನೀಡಿದರೆ ಅದರಿಂದ ಅವಳ ಬದುಕಿನ ಎಲ್ಲಾ ಹಂತಗಳಲ್ಲೂ ಇಡೀ ಕುಟುಂಬವು ಆರೋಗ್ಯದಿಂದಿರಲು ಸಾಧ್ಯವೆಂದರು. ಹಿತ್ತಲ ಗಿಡ ಮದ್ದಲ್ಲವೆಂಬ ಭಾವನೆ ದೂರವಾಗ ಬೇಕು. ಸುತ್ತೂರು ಶ್ರೀಕ್ಷೇತ್ರದ ಸುಮಧುರ ಪರಿಸರದಲ್ಲಿ ಯುವ ಜನತೆ ಮತ್ತು ಅನುಭವಿ ತಜ್ಞರ ಸಮ್ಮಿಲನದಿಂದಾಗಿ ಇಲ್ಲಿನ ಕೃಷಿ ವಿಜ್ಞಾನ ಕೇಂದ್ರ ರೈತರಿಗಾಗಿ ಉಪಯುಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಿರು ಸಭಾಭವನದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಜೆ.ಎಚ್. ಕುಲಕರ್ಣಿಯವರು, "ಯುಗಯುಗಾಂತರಗಳಿಂದ ಬಂದ ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸುವ ಮೂಲಕ ನಾವು ಕೃಷಿ ಕ್ಷೇತ್ರದಲ್ಲಿ ನಮ್ಮತನವನ್ನು ಕಂಡುಕೊಳ್ಳಬೇಕು. ನೀರಿನ ಕೊರತೆಯನ್ನು ನೀಗಿಸುವ ಸಲುವಾಗಿ, ಕಡಿಮೆ ನೀರಿನಲ್ಲಿಯೇ ಕೃಷಿ ಮಾಡುವ ವಿಧಾನಗಳನ್ನು ರೂಢಿಸಿಕೊಳ್ಳಬೇಕು. ಸುಧಾರಿತ ಬೀಜಗಳನ್ನು ಬಳಸಿಕೊಂಡು ವೈವಿಧ್ಯ ಸ್ವರೂಪದ ಬೆಳೆಗಳನ್ನು ಬೆಳೆಯಬೇಕು" ಎಂದು ನುಡಿದರು.

ಐಸಿಎಆರ್‌ನ ವಲಯ ನಿರ್ದೇಶಕರಾದ ಶ್ರೀ ಎಸ್. ಪ್ರಭುಕುಮಾರ್‌ರವರು, ಪದ್ಮಶ್ರೀ ಡಾ. ಎಂ. ಮಹದೇವಪ್ಪನವರು ರಚಿಸಿದ 'ರೈತಗೀತೆ' ಕವನಸಂಕಲನವನ್ನು ಬಿಡುಗಡೆ ಮಾಡಿ ಮಾತನಾಡಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಗೌರವ ಕಾರ್ಯದರ್ಶಿಗಳಾದ ಶ್ರೀ ಎನ್.ಎಸ್. ಮಹದೇವಯ್ಯನವರು ಮತ್ತಿತರ ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಪಾಲ್ಗೊಂಡಿದ್ದ ಸಿಎಫ್‌ಟಿಆರ್‌ಐ ನ ಡಾ. ಎನ್.ಜಿ. ಮಲ್ಲೇಶ್, ಡಾ. ಕೆ.ಎಸ್. ವೆಂಕಟೇಶಮೂರ್ತಿ, ಶ್ರೀ ಮಹೇಶ್ ಮತ್ತು ಶ್ರೀ ಬೊಮ್ಮಿಗಟ್ಟಿ ಹಾಗೂ ಸಂವಹನ ಪ್ರಕಾಶನದ ಶ್ರೀ ಡಿ.ಎನ್. ಲೋಕಪ್ಪನವರನ್ನು ಸುತ್ತೂರು ಶ್ರೀಗಳವರು ಸನ್ಮಾನಿಸಿ ಆಶೀರ್ವದಿಸಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಸಂಗೀತ ಶಿಕ್ಷಕರಾದ ಶ್ರೀ ವಿ.ಪಿ. ಹೆಗ್ಡೆಯವರು ಪ್ರಾರ್ಥನೆ ಮಾಡಿದರು. ಡಾ. ಎಂ. ಮಹದೇವಪ್ಪನವರು ಸ್ವಾಗತಿಸಿದರು. ಪ್ರೊ. ಎಂ. ರುದ್ರಾರಾಧ್ಯರು ವಂದನಾರ್ಪಣೆ ಮಾಡಿದರೆ, ಕೃಷಿ ವಿಜ್ಞಾನ ಕೇಂದ್ರದ ವಿಷಯ ತಜ್ಞರಾದ ಶ್ರೀ ಬಿ.ಎಸ್. ಹರೀಶ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು.

□

ಜೆಎಸ್‌ಎಸ್ ಕಾನೂನು ಕಾಲೇಜು, ಮೈಸೂರು

ದಿನಾಂಕ 20.4.2009 ರಂದು ಕಾಲೇಜಿನಲ್ಲಿ ನೂತನ ಕುಲಪತಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ವಹಿಸಿದ್ದರು. ಅಧ್ಯಕ್ಷತೆಯನ್ನು ಭಾರತದ ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ಗೌ. ನ್ಯಾ. ಡಾ. ಶಿವರಾಜ್ ವಿ. ಪಾಟೀಲ್‌ರವರು ವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ವಿ.ಜಿ. ತಳವಾರ್, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎನ್. ಪ್ರಭುದೇವ್ ಮತ್ತು ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಜೆ.ಎಸ್. ಪಾಟೀಲ್‌ರವರುಗಳನ್ನು ಶ್ರೀಗಳವರು ಸನ್ಮಾನಿಸಿದರು. ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಕೆ. ಚಿದಾನಂದಗೌಡರು ಅಭಿನಂದನಾ ಭಾಷಣವನ್ನು ಮಾಡಿದರು. ಜೆಎಸ್‌ಎಸ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕೆ.ಎಸ್. ಸುರೇಶ್‌ರವರು ಸ್ವಾಗತ ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಪ್ರೊ. ಎಸ್.ಪಿ. ಉಮಾದೇವಿಯವರು ನಡೆಸಿಕೊಟ್ಟರು. ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ವಂದಿಸಿದರು.

ಎಸ್‌ಜೆಸಿಇ ಚಟುವಟಿಕೆಗಳು

ಜಯಚಾಮರಾಜೇಂದ್ರ ತಾಂತ್ರಿಕ ಮಹಾವಿದ್ಯಾಲ - ವಿಜ್ಞಾನ ಮತ್ತು ತಂತ್ರಜ್ಞಾನ ಉದ್ದಿಮೆಗಾರರ ಸಂಸ್ಥೆಯು (SJCE-STEP) ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತು (KCTU), ಮತ್ತು ಬೆಂಗಳೂರು ಹಾಗೂ ಸಣ್ಣ ಕೈಗಾರಿಕೋದ್ಯಮಗಳ ಉನ್ನತೀಕರಣ ಬ್ಯಾಂಕ್ (ಭಾರತ ಸರ್ಕಾರ) ಇವರ ಸಹಯೋಗದೊಂದಿಗೆ 2008-09 ನೇ ಸಾಲಿನಲ್ಲಿ "ನಿರಂತರ ಶಿಕ್ಷಣ ಕಾರ್ಯಕ್ರಮದ (CEP)"ದ ಅಡಿಯಲ್ಲಿ ಕೈಗಾರಿಕೋದ್ಯಮಿಗಳಿಗೆ, ಉದ್ದಿಮೆದಾರರಿಗೆ ಮತ್ತು ವಿದ್ಯಾರ್ಥಿಗಳಿಗಾಗಿ ಮೈಸೂರು ಮತ್ತು ಚಾಮರಾಜನಗರಗಳಲ್ಲಿ ಕೆಳಕಂಡಂತೆ ಒಂದು ದಿನದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಕ್ರ ಸಂ	ಕಾರ್ಯಕ್ರಮದ ಹೆಸರು	ದಿನಾಂಕ	ಅಭ್ಯರ್ಥಿ ಸಂಖ್ಯೆ
1.	ಪೀಪಲ್ ಎಫೆಕ್ಟಿವ್‌ನೆಸ್ ಎನ್‌ಹ್ಯಾನ್ಸ್‌ಮೆಂಟ್ ಪ್ರೋಗ್ರಾಂ	18.10.2008	46
2.	ಐಎಸ್‌ಓ ಅವೇರ್‌ನೆಸ್ ಪ್ರೋಗ್ರಾಂ	13.11. 2008	40
3.	ಐಎಸ್‌ಓ ಇಂಟರ್ನಲ್ ಆಡಿಟರ್ಸ್ ಟ್ರೈನಿಂಗ್ ಪ್ರೋಗ್ರಾಂ	14.11.2008	28
4.	ತಂಡ ಶಕ್ತಿ ಬಳಕೆ ಸಮಸ್ಯೆಗಳ ಇಳಿಕೆ	28.11.2008	37
5.	ವರ್ಕ್ ಕಲ್ಚರ್ ಬಿಲ್ಡಿಂಗ್ ಫಾರ್ ಆರ್ಗನೈಸೇಷನಲ್ ಎಕ್ಸೆಲೆನ್ಸ್	26.2.2009	19
6.	ಕ್ಯಾಲಿಬ್ರೇಷನ್ - ಎ ಕ್ವಾಲಿಟಿ ಪರ್‌ಸ್ಪೆಕ್ಟಿವ್	4.3.2009	19
7.	ಐಎಸ್‌ಓ 1400/: 2004 (ಇಎಂಎಸ್) ಅಂಡ್ ಒಎಚ್‌ಎಸ್‌ಎಎಸ್ 1800/: 200713	ಮಾರ್ಚ್ 2009	26
8.	ಸ್ಮಾರ್ಟ್ ಟೆಕ್ನಾಲಜಿ ಫಾರ್ ಸ್ಮಾರ್ಟರ್ ಬಿಸಿನೆಸ್	28.3.2009	37

ಈ ಮೇಲ್ಕಂಡ ಕಾರ್ಯಕ್ರಮಗಳಿಗೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಮೈಸೂರು ಮತ್ತು ಚಾಮರಾಜನಗರದ ಕೈಗಾರಿಕೋದ್ಯಮಿಗಳು ಇದರ ಉಪಯೋಗವನ್ನು ಪಡೆದಿರುತ್ತಾರೆ.

ಎಸ್‌ಜೆಸಿಇ-ಪೇಸ್-ಪಿಎಲ್‌ಎಂ ಕೇಂದ್ರ ಪ್ರಾರಂಭ

ಜಾಗತಿಕ ಸ್ಪರ್ಧೆಯನ್ನು ಎದುರಿಸುವ ಸಲುವಾಗಿ ಮೆಕ್ಯಾನಿಕಲ್ ಹಾಗೂ ಆಟೋಮೊಬೈಲ್ ಇಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ಎಲ್ಲ ರೀತಿಯಲ್ಲೂ ಸಜ್ಜುಗೊಳಿಸುವ ಉದ್ದೇಶದಿಂದ ದಿನಾಂಕ 17.3.2009 ರಂದು ಸಂಸ್ಥೆಯಲ್ಲಿ 'ಎಸ್‌ಜೆಸಿಇ-ಪೇಸ್-ಪಿಎಲ್‌ಎಂ ಕೇಂದ್ರ'ದ (ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು - ಪಾರ್ಟ್‌ನರ್ಸ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ಕೊಲ್ಯಾಬರೇಟಿವ್ ಇಂಜಿನಿಯರಿಂಗ್ ಎಜ್ಯುಕೇಷನ್ - ಪ್ರಾಡಕ್ಟ್ ಲೈಫ್ ಸೈಕಲ್ ಮ್ಯಾನೇಜ್‌ಮೆಂಟ್ ಕೇಂದ್ರ) ಉದ್ಘಾಟನೆ ನಡೆಯಿತು.

ವಿಶ್ವದ ಬೃಹತ್ ಕೈಗಾರಿಕೆಗಳಾದ ಜನರಲ್ ಮೋಟಾರ್ಸ್, ಎಚ್‌ಪಿ, ಸೀಮೆನ್ಸ್, ಆಲ್‌ಟೈರ್, ಆಟೋ ಡೆಸ್ಕ್, ಸನ್ ಮೈಕ್ರೋಸಿಸ್ಟಮ್ಸ್ ಇವುಗಳ ಒಕ್ಕೂಟವೇ 'ಪೇಸ್'. ಹಾರ್ಡ್‌ವೇರ್ ಹಾಗೂ ಸಾಫ್ಟ್‌ವೇರ್‌ಗಳ ಅನುದಾನ ಬೇಡಿಕೆಗೆ ಸಂಬಂಧಿಸಿದಂತೆ, ಪ್ರಪಂಚದಾದ್ಯಂತ 43 ಸಂಸ್ಥೆಗಳ ನಡುವೆ ನಡೆದ ತೀವ್ರ ಪೈಪೋಟಿಯಲ್ಲಿ ವಿಶ್ವದ ಮೂವರು ತೀರ್ಪುಗಾರರು ಎಸ್‌ಜೆಸಿಇ ಯನ್ನು ಆಯ್ಕೆ ಮಾಡಿದ್ದಾರೆ. ಬೆಂಗಳೂರಿನ ಪಿಇಎಸ್ ಮತ್ತು ಅಹಮದಾಬಾದ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್ ಸಂಸ್ಥೆಗಳನ್ನು ಹೊರತುಪಡಿಸಿದರೆ ಎಸ್‌ಜೆಸಿಇ ಕಾಲೇಜು ಈ ಒಕ್ಕೂಟಕ್ಕೆ ಆಯ್ಕೆಯಾದ ಭಾರತದ ಏಕೈಕ ಸಂಸ್ಥೆಯಾಗಿದೆ.

ಸಮಾರಂಭದಲ್ಲಿ ಎಸ್‌ಜೆಸಿಇ ಪೇಸ್ ಒಕ್ಕೂಟಕ್ಕೆ ಆಯ್ಕೆಯಾಗಿರುವ ಹಾಗೂ ಸಿಎಡಿ/ಸಿಎಎಂ/ಸಿಎಇ ಉಪಕರಣ ಗಳಿಗೆ ಸಂಬಂಧಪಟ್ಟ ಸಾಫ್ಟ್‌ವೇರ್ ಹಾಗೂ ಹಾರ್ಡ್‌ವೇರ್‌ಗಳಿಗೆ ಸಂಬಂಧಿಸಿದಂತೆ 9.59 ಕೋಟಿ ಡಾಲರ್‌ಗಳ ಧನಸಹಾಯವನ್ನು ಮೂರು ವರ್ಷಗಳ ಅವಧಿಗೆ ವಿಸ್ತರಿಸಿರುವ ಬಗ್ಗೆ ಅಧಿಕೃತ ಘೋಷಣೆ ಮಾಡಲಾಯಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧ್ಯಕ್ಷರಾದ ಈ ಸಂದರ್ಭದಲ್ಲಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಮಹಾಸ್ವಾಮಿಗಳವರು, ಜನರಲ್ ಮೋಟಾರ್ಸ್ ಸಂಸ್ಥೆಯ ಉಪಾಧ್ಯಕ್ಷರಾದ ಮಿಸ್ ಶೀಲಾ ಸಾರ್ವರ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಶ್ರೀ ಬಿ.ಎನ್. ಬೆಟ್‌ಕೆರೂರ್, ತಾಂತ್ರಿಕ ನಿರ್ದೇಶಕರಾದ ಪ್ರೊ.

ಎಂ.ಹೆಚ್. ಧನಂಜಯ, ಬೆಂಗಳೂರಿನ ಜನರಲ್ ಮೋಟಾರ್ಸ್‌ನ ಇಂಜಿನಿಯರಿಂಗ್ ಗ್ರೂಪ್ ಮ್ಯಾನೇಜರ್ ಶ್ರೀ ಜಿ. ಪಶುಪತಿ ಮಠ್, ಪೇಸ್ ಒಕ್ಕೂಟದ ಇತರ ಸಂಸ್ಥೆಗಳ ಪ್ರತಿನಿಧಿಗಳು, ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಸಂಸ್ಥೆಯ ಬೋಧಕ, ಬೋಧಕೇತರ ನೌಕರರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಪ್ರಾಂಶುಪಾಲರಾದ ಡಾ. ಬಿ.ಜಿ. ಸಂಗಮೇಶ್ವರ ಅವರು ಆಗಮಿಸಿದ್ದ ಗಣ್ಯರುಗಳಿಗೆ ಸ್ವಾಗತ ಬಯಸಿದರು. ದೀಪವನ್ನು ಬೆಳಗಿಸುವುದರ ಮೂಲಕ ಸಮಾರಂಭಕ್ಕೆ ಚಾಲನೆ ನೀಡಲಾಯಿತು. ನಂತರ ಪೇಸ್ ಪಾಲುದಾರ ಸಂಸ್ಥೆಗಳಿಂದ ಬಂದಿದ್ದ ಪ್ರತಿನಿಧಿಗಳು ತಂತಮ್ಮ ಸಂಸ್ಥೆಗಳ ಕಿರುಪರಿಚಯ ನೀಡಿದರು.

ಪೇಸ್ ಸಂಸ್ಥೆಯ ಬಗೆಗಿನ ಒಂದು ಕಿರುಪರಿಚಯವನ್ನು ಮಿಸ್ ಶೀಲಾ ಸಾರ್ವರ್‌ರವರು ದೃಶ್ಯಾವಳಿಯ ಮುಖಾಂತರ ಮಾಡಿಕೊಟ್ಟರು. "ಭಾರತೀಯ ಆಟೋಮೋಟಿವ್ ಉದ್ಯಮಕ್ಕೆ ಹೊಸ ಶಕ್ತಿ, ಮೆರುಗು ತುಂಬುವುದು ಹಾಗೂ ಹೊಸ ತಲೆಮಾರಿನ ಎಂಜಿನಿಯರ್‌ಗಳನ್ನು ಜಾಗತಿಕ ಮಟ್ಟದ ವೃತ್ತಿಪರರನ್ನಾಗಿಸುವುದು ಈ ಸಂಸ್ಥೆಯ ಉದ್ದೇಶ. ಕಳೆದ ಒಂಬತ್ತು ವರ್ಷಗಳಿಂದ ಪೇಸ್ ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಜಾಗತಿಕ ಆರ್ಥಿಕ ಮುಗ್ಗಟ್ಟು ಆಟೋಮೊಬೈಲ್ ಕ್ಷೇತ್ರವನ್ನೂ ಕಾಡಿದೆಯಾದರೂ, ಅದನ್ನೂ ಮೀರಿ ನಿಂತು ಹೊಸ ಎಂಜಿನಿಯರ್‌ಗಳನ್ನು ಪ್ರೋತ್ಸಾಹಿಸುತ್ತೇವೆ. ಮುಗ್ಗಟ್ಟು ಮುಗಿದ ಮೇಲಾದರೂ ಹೊಸ ಮಾರುಕಟ್ಟೆಗೆ ಇಂಜಿನಿಯರ್‌ಗಳು ಬೇಕಲ್ಲವೆ?" ಎಂದು ಅವರು ನುಡಿದರು.

ಇಂಟಲೆಕ್ಚುಯಲ್ ಪ್ರಾಪರ್ಟಿ ರೈಟ್ಸ್ ಕಾರ್ಯಾಗಾರದಲ್ಲಿ ಶ್ರೀ ಅರವಿಂದ್, ಶ್ರೀಮತಿ ರಚನಾ ಸಿಂಗ್, ಡಾ. ಬಿ.ಎಸ್. ಬಸವರಾಜಯ್ಯ, ಡಾ. ಬಿ. ಜಿ. ಸಂಗಮೇಶ್ವರ, ಶ್ರೀ ಮುರಳೀಧರನ್ ಮತ್ತು ಡಾ. ಸಹಾ

ದಿನಾಂಕ 2.2.2009 ರಂದು ಸಂಸ್ಥೆಯ ಬಯೋಟೆಕ್ನಾಲಜಿ ವಿಭಾಗದವರು 'ಇಂಟಲೆಕ್ಚುಯಲ್ ಪ್ರಾಪರ್ಟಿ ರೈಟ್ಸ್' ಎಂಬ ವಿಷಯವಾಗಿ ಒಂದು ವಾರದ ಕಾರ್ಯಾಗಾರವನ್ನು ಏರ್ಪಡಿಸಿದ್ದರು. ಇದರಲ್ಲಿ ರಾಜ್ಯದ ಟೆಕ್ವಿಪ್ (ಟೆಕ್ನಿಕಲ್ ಎಜುಕೇಷನ್ ಕ್ವಾಲಿಟಿ ಇಂಪ್ರೂವ್‌ಮೆಂಟ್ ಪ್ರೋಗ್ರಾಂ) ಯೋಜನೆಯಲ್ಲಿರುವ ಎಂಜಿನಿಯರಿಂಗ್ ಕಾಲೇಜುಗಳ 57 ಜನ ಬೋಧಕರು ಭಾಗವಹಿಸಿದ್ದರು. ಎಕ್ಸೆಲೆಕ್ಟ್ ಐಪಿ ಸಲ್ಯೂಷನ್ಸ್ ರವರು ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ಈ ಕಾರ್ಯಾಗಾರ ವನ್ನು ನಡೆಸಿದರು. ಒಟ್ಟು ಮೂರು ವಾರಗಳ ಅವಧಿಯ ಈ ಕಾರ್ಯಾಗಾರದ ಮೊದಲನೇ ವಾರ ಎಂಎಸ್‌ಆರ್‌ಐಟಿ ಯಲ್ಲಿ (ಬೆಂಗಳೂರು), ಎರಡನೇ ವಾರ ಎಸ್‌ಡಿಎಂ ಕಾಲೇಜಿನಲ್ಲಿ (ಧಾರವಾಡ) ಹಾಗೂ ಮೂರನೇ ವಾರ ಎಸ್‌ಜೆಸಿಇಯಲ್ಲಿ ನಡೆಯಿತು.

ಈ ಕಾರ್ಯಾಗಾರದ ಮುಖ್ಯ ಉದ್ದೇಶ 'ಇಂಟಲೆಕ್ಚುಯಲ್ ಪ್ರಾಪರ್ಟಿ ರೈಟ್ಸ್' ವಿಷಯವನ್ನು ಪಠ್ಯಕ್ರಮದಲ್ಲಿ ಅಳವಡಿಸುವುದು ಹಾಗೂ ಸಮಗ್ರ ಮಾಹಿತಿಗಳೊಂದಿಗೆ ಸಂಶೋಧನಾ ಕಾರ್ಯದಲ್ಲಿ ಮಾರ್ಗದರ್ಶನ ಮಾಡುವುದು.

ಕಾರ್ಯಾಗಾರದಲ್ಲಿ 'ಇಂಟಲೆಕ್ಚುಯಲ್ ಪ್ರಾಪರ್ಟಿ ರೈಟ್ಸ್' ಬಗ್ಗೆ ಪರಿಚಯ, ಕಾಪಿರೈಟ್ ಹಕ್ಕಿನ ಉಪಯುಕ್ತತೆ, ಟ್ರೇಡ್ ಮಾರ್ಕ್ ಹಾಗೂ ಬ್ರ್ಯಾಂಡಿಂಗ್, ಪೇಟೆಂಟ್ ಹಾಗೂ ಇಂಡಸ್ಟ್ರಿಯಲ್ ಡಿಸೈನ್ ಬಗ್ಗೆ ಪರಿಚಯ ಇವುಗಳಲ್ಲದೆ, ಬಯೋಟೆಕ್ನಾಲಜಿ ಹಾಗೂ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಇಂಟಲೆಕ್ಚುಯಲ್ ಪ್ರಾಪರ್ಟಿಯ ಸ್ವರೂಪ ಮುಂತಾದ ವಿಷಯಗಳ ಬಗ್ಗೆ ಮಾಹಿತಿ ಒದಗಿಸಲಾಯಿತು.

ದಿನಾಂಕ 6.2.2009 ರಂದು ನಡೆದ ಸಮಾರೋಪ ಸಮಾರಂಭದಲ್ಲಿ ಪ್ರಾಂಶುಪಾಲರಾದ ಡಾ. ಬಿ.ಜಿ. ಸಂಗಮೇಶ್ವರ, ಚೆನ್ನೈ ಪೇಟೆಂಟ್ ಕಛೇರಿಯ ಶ್ರೀ ಮಧುಸೂದನ್, ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಡಾ. ಸಹಾ ಅವರುಗಳು ಭಾಗವಹಿಸಿದ್ದರು.

ಸೈಬೀರಿಯಾ -2009

ಐಇಇಇ-ಎಸ್‌ಜೆಸಿಇ (ಇನ್ಸ್‌ಟಿಟ್ಯೂಟ್ ಆಫ್ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರ್ಸ್-ಎಸ್‌ಜೆಸಿಇ) ವಿದ್ಯಾರ್ಥಿವೃಂದದ ಈ ವರ್ಷದ ರಾಷ್ಟ್ರೀಯ ಮಟ್ಟದ ತಾಂತ್ರಿಕ ಸಮಾವೇಶವಾದ ಸೈಬೀರಿಯಾ-2009 ದಿನಾಂಕ 27.2.2009 ರಿಂದ

1.3.2009 ರವರೆಗೆ ನಡೆಯಿತು. ಫಿಲಿಪ್ಸ್ ಹೆಲ್ತ್ ಕೇರ್‌ನ ತಾಂತ್ರಿಕ ನಿರ್ದೇಶಕರಾದ ಡಾ. ಶ್ಯಾಮ್ ವಾಸುದೇವರಾವ್ ಮುಖ್ಯ ಅತಿಥಿಗಳಾಗಿದ್ದರು ಹಾಗೂ ಬಾಶ್ ರೆಕ್ಸ್‌ರಾತ್ ಸಂಸ್ಥೆಯ ಶ್ರೀ ದತ್ತಾತ್ರೇಯ ಗೌರ್‌ರವರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಸಂಸ್ಥೆಯ ಪ್ರಾಂಶುಪಾಲರಾದ ಡಾ. ಬಿ.ಜಿ. ಸಂಗಮೇಶ್ವರರವರು ಉದ್ಘಾಟನೆಯನ್ನು ನೆರವೇರಿಸಿದರು. ಈ ಸಮಾವೇಶದಲ್ಲಿ ಪ್ಯಾಪಿರಸ್, ಪ್ಯಾಗ್‌ಮೆಟಿ, ಎಕ್ಸ್-ಕ್ವಿಸಿಟ್, ರೋಬೋ ಯುರೇಕಾ, ನೈಟ್ ಔಟ್ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಫಿಲಿಪ್ಸ್ ಸಂಸ್ಥೆ ಪ್ರತಿನಿಧಿಗಳ ಭೇಟಿ

ಫಿಲಿಪ್ಸ್ ಸಂಸ್ಥೆಯ ಪ್ರತಿನಿಧಿಗಳ ಭೇಟಿಯ ಸಂದರ್ಭದಲ್ಲಿ ಶ್ರೀ ನರೇಂದ್ರನಾಥ್ ಉಡುಪ, ಮಿ. ಸರ್ಜ್ ಹರ್ಮನ್ಸ್, ಡಾ. ಬಿ.ಜಿ. ಸಂಗಮೇಶ್ವರ ಮತ್ತು ಶ್ರೀ ಜಗದೀಶ್ ಕರ್ನಾಟಕ

ಕಾಲೇಜಿನಲ್ಲಿ ಪ್ರತಿ ವರ್ಷವೂ ಫಿಲಿಪ್ಸ್-ಎಸ್‌ಜೆಸಿಇ ವತಿಯಿಂದ ಎಂಬೆಡೆಡ್ ಸಿಸ್ಟಂ ಪ್ರಾಡಕ್ಟ್ಸ್ ಡೆವಲಪ್‌ಮೆಂಟ್ ಕೋರ್ಸನ್ನು ನಡೆಸಲಾಗುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ ಫಿಲಿಪ್ಸ್‌ನ ಟೆಕ್ನಾಲಜಿ ಮ್ಯಾನೇಜರ್ ಮಿ. ಸರ್ಜ್ ಹರ್ಮನ್ಸ್‌ರವರು ಎಸ್‌ಜೆಸಿಇ-ಫಿಲಿಪ್ಸ್ ಲ್ಯಾಬ್‌ನ ಬೋಧಕರು ಹಾಗೂ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಪ್ರಾಂಶುಪಾಲರಾದ ಡಾ. ಬಿ.ಜಿ. ಸಂಗಮೇಶ್ವರ, ಇನ್‌ಸ್ಟ್ರುಮೆಂಟೇಷನ್ ಟೆಕ್ನಾಲಜಿ ವಿಭಾಗ ಮುಖ್ಯಸ್ಥರಾದ ಡಾ. ಎಂ. ಸುಕುಮಾರ್, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗದ ಡಾ. ಸಿ. ಆರ್. ವೇಣುಗೋಪಾಲ್ ಹಾಗೂ ಶ್ರೀ ರುದ್ರಸ್ವಾಮಿಯವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಕ್ರೀಡಾ ಚಟುವಟಿಕೆಗಳು

ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗದ ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಯಾದ ಶ್ರೀ ವಿಜಯಕೀರ್ತಿ ಶಿವಮೊಗ್ಗದ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್ ಆಶ್ರಯದಲ್ಲಿ ನಡೆದ ಕರ್ನಾಟಕ ರಾಜ್ಯ ಚೆಸ್ ಚಾಂಪಿಯನ್‌ಶಿಪ್-2009 ಸ್ಪರ್ಧೆಯಲ್ಲಿ 10 ಅಂಕಗಳಿಗೆ 8½ ಅಂಕಗಳನ್ನು ಪಡೆದು ರನ್ನರ್ ಅಪ್ ಪ್ರಶಸ್ತಿ ಪಡೆದಿರುತ್ತಾರೆ.

ಎಡದಿಂದ ಬಲ: ಶ್ರೀ ಎನ್.ಪಿ. ಮಂಜುನಾಥ್, ಡಾ. ಬಿ.ಜಿ. ಸಂಗಮೇಶ್ವರ, ಶ್ರೀ ಬಿ.ವಿ. ಸುದರ್ಶನ್, ಶ್ರೀ ಎಚ್.ಪಿ. ಉಮೇಶ್, ಶ್ರೀ ವಿ. ಚೇತನ್‌ಕುಮಾರ್, ಶ್ರೀ ಎನ್.ಎಂ. ಬಸವರಾಜ್, ಶ್ರೀ ಆರ್. ನೂತನ್ ಕುಮಾರ್.

ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಆದಿಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಜೆಎಸ್‌ಎಸ್ ಅಂತರ ಕಾಲೇಜುಗಳ ಕ್ರೀಡಾಕೂಟದಲ್ಲಿ ಪುರುಷರ ವಿಭಾಗದ ಬಾಲ್ ಬ್ಯಾಡ್‌ಮಿಂಟನ್ ಪಂದ್ಯದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಜಯ ಗಳಿಸಿದ್ದಾರೆ.

***

ಇನ್‌ಫೋಸಿಸ್ ಸಂಸ್ಥೆಯ ಆಶ್ರಯದಲ್ಲಿ ನಡೆದ ರಾಜ್ಯ ಮಟ್ಟದ ಇಂಜಿನಿಯರಿಂಗ್ ಕಾಲೇಜುಗಳ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕಾಲೇಜಿನ ವಿದ್ಯಾರ್ಥಿಗಳು ರನ್ನರ್ಸ್ ಅಪ್ ಪ್ರಶಸ್ತಿಯನ್ನು ಗಳಿಸಿಕೊಂಡಿದ್ದಾರೆ.

***

ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ನಡೆದ ಕರ್ನಾಟಕ ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳ ಪಂದ್ಯಾವಳಿ (ರಿವೀಲ್ಸ್ ಕಪ್) ಹಾಕಿ ಪಂದ್ಯದಲ್ಲಿ ಕಾಲೇಜಿನ ತಂಡವು ರನ್ನರ್ಸ್ ಅಪ್ ಪ್ರಶಸ್ತಿಯನ್ನು ಗಳಿಸಿದೆ.

ನಿಂತಿರುವವರು ಎಡದಿಂದ ಬಲ: ಪುನೀತ್ ರೇವಣ್ಣ, ನವೀನ್ ಕುಮಾರ್, ನವೀನ್, ಪೃಥ್ವಿ ಶೇಖರ್, ಕಾರ್ತಿಕ್ ರಾಘವನ್, ರಮಣ್, ಮೊಹಮ್ಮದ್ ಇಮ್ರಾನ್ ಖಾನ್, ಮನೋಜ್

ಕುಳಿತಿರುವವರು ಎಡದಿಂದ ಬಲ: ಶ್ರೀಹರ್ಷ (ನಾಯಕ), ಶ್ರೀ ಬಿ.ವಿ. ಸುದರ್ಶನ್, ಕ್ರೀಡಾ ಮುಖ್ಯಸ್ಥರು, ಡಾ. ಬಿ.ಜಿ. ಸಂಗಮೇಶ್ವರ ಪ್ರಾಂಶುಪಾಲರು, ಕಾರ್ತಿಕ್ (ಉಪನಾಯಕ), ಕಿರಣ್, ಕುಲ್‌ದೀಪ್, ನಿರ್ಮಿತ್, ಪ್ರತ್ಯಾಜ್

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲ ಯದ 2009-10 ನೇ ಸಾಲಿನ ಮೈಸೂರು ಪ್ರಾಂತ್ಯದ ಅಂತರ ಕಾಲೇಜು ಕ್ರಿಕೆಟ್ ಪಂದ್ಯಾವಳಿಯಲ್ಲಿ ಕಾಲೇಜಿನ ವಿದ್ಯಾರ್ಥಿಗಳು ವಿಜಯಿಗಳಾಗಿದ್ದಾರೆ.

***

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲ ಯದ 2009-10ನೇ ಸಾಲಿನ ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್ ಪಂದ್ಯಾವಳಿಯು ಸಂಸ್ಥೆಯಲ್ಲಿ ಮಾರ್ಚ್ 16 ರಿಂದ 18 ರವರೆಗೆ ನಡೆಯಿತು.

□

ಜೆಎಸ್‌ಎಸ್ ಇನ್ಸ್‌ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್, ಮೈಸೂರು

ಮೈಸೂರು ವಿಶ್ವವಿದ್ಯಾನಿಲಯವು ಇತ್ತೀಚೆಗೆ ನಡೆಸಿದ ಅಂತಿಮ ಬಿ.ಎಸ್‌ಸಿ. (ಸ್ಪೀಚ್ ಅಂಡ್ ಹಿಯರಿಂಗ್) ಪರೀಕ್ಷೆಯಲ್ಲಿ ಕಾಲೇಜಿನ ಆರು ಜನ ವಿದ್ಯಾರ್ಥಿಗಳು ರ್‍ಯಾಂಕ್ ಗಳಿಸಿರುತ್ತಾರೆ. ಇವರಿಗೆ ಅಭಿನಂದನೆಗಳು.

1.	ನೂರೈನ್ ಫರೂಕಿ	I
2.	ಆರ್. ಶರಣ್ಯ	III
3.	ಕೀರ್ತನಾ ಗಣೇಶ್ ಬಾಬು	V
4.	ಫರ್ಹಾ ಮೊಹಮದ್ ಹನೀಫ್	VI
5.	ಜೆ. ಕವಿತಾ	VII
6.	ಎಂ.ಎಸ್. ಸೌಮ್ಯ	IX

ಜೆಎಸ್‌ಎಸ್ ವಿಭಿನ್ನ–ಸಮರ್ಥರ ಪಾಲಿಟೆಕ್ನಿಕ್

ಇತ್ತೀಚೆಗೆ ನಡೆದ ಸಂಸ್ಥೆಯ ವಾರ್ಷಿಕೋತ್ಸವ ಸಮಾರಂಭ ದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಾಫ್ಟ್‌ವೇರ್ ಪ್ಯಾರಡೈಮ್ಸ್ ಇನ್‌ಫೋಟೆಕ್ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎನ್. ಮಧುಕರ್‌ರವರು ಅರ್ಹ ಅಂಧ ವಿದ್ಯಾರ್ಥಿಗಳಿಗೆ ಆರು ತಿಂಗಳ ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್ ತರಬೇತಿಯನ್ನು ನೀಡಲು ಉದ್ದೇಶಿಸಿರುವುದಾಗಿ ತಿಳಿಸಿದರು.

ಪ್ರಸ್ತುತ ಅವರ ಸಂಸ್ಥೆಯು 900 ಕೋಟಿ ರೂ.ಗಳ ವಾರ್ಷಿಕ ವಹಿವಾಟು ನಡೆಸುತ್ತಿದ್ದು 4,500 ಕ್ಕೂ ಹೆಚ್ಚು ಉದ್ಯೋಗಿಗಳು ಇಂಗ್ಲೆಂಡ್ ಮತ್ತು ಅಮೆರಿಕಗಳಲ್ಲಿ ಸಾಫ್ಟ್‌ವೇರ್ ತಂತ್ರಜ್ಞಾನ ಅಭಿವೃದ್ಧಿಯಲ್ಲಿ ತೊಡಗಿದ್ದಾರೆಂದು ಹೇಳಿದರು. ಮುಂದಿನ ದಿನಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಮೆಡಿಕಲ್ ಟ್ರಾನ್ಸ್‌ಕ್ರಿಪ್ಷನ್ ಕ್ಷೇತ್ರದಲ್ಲಿ ಉತ್ತಮ ಉದ್ಯೋಗಕ್ಕೆ ಅಪಾರ ಅವಕಾಶಗಳಿವೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶ್ರೀ ಜಯಚಾಮರಾಜೇಂದ್ರ ಇಂಜಿನಿಯ ರಿಂಗ್ ಕಾಲೇಜಿನ ಉದ್ಯೋಗ ಮತ್ತು ತರಬೇತಿ ವಿಭಾಗದ ಉಪ ನಿರ್ದೇಶಕರಾದ ಶ್ರೀ ಬಿ. ಮಹಾನಂದರವರು ಪಾಲಿಟೆಕ್ನಿಕ್‌ನ ವಾರ್ಷಿಕ ಸಂಚಿಕೆ "ಪ್ರಾಜೆಕ್ಟ್ ಡಿ" ಯನ್ನು ಬಿಡುಗಡೆ ಮಾಡಿ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ಪ್ರಾಂಶುಪಾಲರಾದ ಶ್ರೀ ಎಚ್.ಬಿ. ಬಸವರಾಜು ರವರು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು.

ಸಮಾರಂಭದಲ್ಲಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಾದ ಶ್ರೀ ನಂಜುಂಡಸ್ವಾಮಿಯವರು ಉಪಸ್ಥಿತರಿದ್ದರು. ಉಪನ್ಯಾಸಕರಾದ ಶ್ರೀ ಕೆ. ಮಹದೇವಸ್ವಾಮಿಯವರು ಅತಿಥಿಗಳನ್ನು ಸ್ವಾಗತಿಸಿ, ಶ್ರೀ ಎನ್.ಎಂ. ಶಿವಕುಮಾರಸ್ವಾಮಿ ಯವರು ವಾರ್ಷಿಕ ವರದಿಯನ್ನು ಮಂಡಿಸಿದರು. ಶ್ರೀ ಎಸ್. ಶ್ರೀನಾಥ್‌ರವರು ವಂದನಾರ್ಪಣೆ ಮಾಡಿದರು. ಅನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಜೆಎಸ್‌ಎಸ್ ಮಹಿಳಾ ಕಾಲೇಜು
ಎಚ್.ಎಸ್.ಆರ್. ಬಡಾವಣೆ, ಬೆಂಗಳೂರು



ಕಾಲೇಜಿನ ವಾರ್ಷಿಕೋತ್ಸವದಲ್ಲಿ ಚಿತ್ರತಾರೆ ಶ್ರೀಮತಿ ವಿನಯಾ ಪ್ರಸಾದ್ 'ವರ್ಧಿನಿ' ವಾರ್ಷಿಕ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಚಿತ್ರದಲ್ಲಿ ನಿವೃತ್ತ ಮುಖ್ಯ ಕಾರ್ಯದರ್ಶಿ ಶ್ರೀ ಎಸ್.ಬಿ. ಮುದ್ದಪ್ಪ, ಪಂಪ ಪ್ರಶಸ್ತಿ ಪುರಸ್ಕೃತ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ, ಪ್ರಾಂಶುಪಾಲರಾದ ಶ್ರೀಮತಿ ಕೆ.ಎಂ. ಇಂದಿರಾ, ಸಂಪಾದಕ ಶ್ರೀ ಹೊನ್ನಶೆಟ್ಟಿ, ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಕು. ಎನ್. ದೀನಾ ಮತ್ತು ಕಾರ್ಯದರ್ಶಿ ಕು. ಆರ್. ಉಷಾ

"ವ್ಯಕ್ತಿ ಬೆಳೆಯುವುದು ಸ್ವಂತ ಆಸಕ್ತಿ ಮತ್ತು ಆಂತರಿಕ ಒತ್ತಡದಿಂದ; ಬರಿಯ ಬುದ್ಧಿವಾದದಿಂದಲ್ಲ. ಅಂತೆಯೇ, ದೊಡ್ಡವರ ವಿಚಾರ ಕೇಳುವುದರಿಂದ ಮನಸ್ಸು ಪ್ರಸನ್ನವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಸಾಧಕರ ಜೀವನಚರಿತ್ರೆಗಳನ್ನು ಓದಿ ಬೆಳೆಯಬೇಕು ಮತ್ತು ಬೆಳೆದು ಸಮಾಜದ ಋಣ ತೀರಿಸಬೇಕು." ಹೀಗೆ ಕರೆ ನೀಡಿದವರು 2008 ನೇ ಸಾಲಿನ ಪಂಪ ಪ್ರಶಸ್ತಿ ಪುರಸ್ಕೃತರಾದ ಖ್ಯಾತ ವಿದ್ವಾಂಸ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀಯವರು. ದಿನಾಂಕ 15.4.2009 ರಂದು ನಡೆದ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ತಮಗೆ ಸಲ್ಲಿಸಿದ ಗೌರವ ಸ್ವೀಕರಿಸಿ ಅವರು ಮಾತನಾಡುತ್ತಿದ್ದರು.

"ನಾನು ದೊಡ್ಡ ಮನುಷ್ಯನಲ್ಲ; ಧನ್ಯತೆಯ ಭಾವದಿಂದ ಓದು-ಬರಹಗಳ ಮೂಲಕ ನನ್ನ ಪಾಡಿಗೆ ನಾನು ಕೆಲಸ ಮಾಡುತ್ತಿದ್ದೇನೆ. ಜನತೆ ನನಗೆ ತೋರುತ್ತಿರುವ ಪ್ರೀತಿಯ ಪ್ರಕಟರೂಪವಾಗಿ ಇಂಥ ಕಾರ್ಯಕ್ರಮಗಳು ನಡೆಯುತ್ತಿವೆ ಅಷ್ಟೆ" ಎಂದು ಪ್ರೊ. ಶಾಸ್ತ್ರಿಗಳು ವಿನಯಪೂರ್ವಕವಾಗಿ ನುಡಿದರು.

ಕಳೆದ ಶತಮಾನದಲ್ಲಿ ಪ್ರೊ. ಟಿ.ಎಸ್. ವೆಂಕಣ್ಣಯ್ಯ, ಪ್ರೊ. ಎಂ. ಹಿರಿಯಣ್ಣ, ಪ್ರೊ. ಕುವೆಂಪು ಅವರಂಥ ಗುರುಶಿಷ್ಯ ಪರಂಪರೆಯನ್ನು ಸ್ಮರಿಸಿದ ಅವರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಸಂಬಂಧ ಹಾಗೆ ಮಧುರವಾಗಿರಬೇಕೆಂದು ಆಶಿಸಿದರು.

ನಿತ್ಯನೂತನ ಶಾಸ್ತ್ರಿಗಳು

ಅಂತಿಮ ಬಿ.ಎ. ವಿದ್ಯಾರ್ಥಿನಿ ಕು. ಕೆ. ಲಕ್ಷ್ಮಿ, ಪ್ರೊ. ಶಾಸ್ತ್ರಿಯವರಿಗೆ ಗೌರವಾರ್ಪಣೆ ನುಡಿ ನಮನ ಸಲ್ಲಿಸಿದ್ದು ವಿಶೇಷವಾಗಿತ್ತು. "ಇದು ಮತ್ತೊಂದು ಅಭಿನಂದನ ಸಮಾರಂಭ ವಲ್ಲ; ವೃದ್ಧಸೇವಾನುರಾಗಕ್ಕಾಗಿ ಎಳೆಯರು ಸಲ್ಲಿಸುತ್ತಿರುವ ಗೌರವಾರ್ಪಣೆ" ಎಂದು ನುಡಿದ ಅವರು ನೂರಕ್ಕೂ ಹೆಚ್ಚು ಮೌಲಿಕ ಕೃತಿ ರಚನೆ ಮಾಡಿರುವ ಈ ಪಂಪ ಪ್ರಶಸ್ತಿ ಪುರಸ್ಕೃತರನ್ನು 'ನಿತ್ಯನೂತನ ಶಾಸ್ತ್ರಿ'ಗಳೆಂದು ಬಣ್ಣಿಸಿದ್ದು ವಿಶೇಷವಾಗಿತ್ತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಎಸ್.ಬಿ. ಮುದ್ದಪ್ಪನವರು ಕಾಲೇಜಿನ ಪರವಾಗಿ ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀಯವರಿಗೆ ಶಾಲು ಹೊದಿಸಿ, ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಶ್ರೀಮತಿ ಶಾಸ್ತ್ರೀಯವರನ್ನೂ ಸಹ ಈ ಸಂದರ್ಭದಲ್ಲಿ ಗೌರವಿಸಲಾಯಿತು.

ಜೆಎಸ್‌ಎಸ್ ಶಿಕ್ಷಕರ ಪ್ರಶಿಕ್ಷಣ ಸಂಸ್ಥೆ, ಸುತ್ತೂರು

"ಭಾರತದಲ್ಲಿ ಕ್ರೀಡೆಗಾಗಿ ಮೀಸಲಿಟ್ಟ ಹಣ ಅಮೆರಿಕಕ್ಕಿಂತ ಕಡಮೆಯಿದ್ದರೂ ಸಾಧನೆಯ ಹಾದಿಯಲ್ಲಿ ಭಾರತವು ಮುಂದಿದೆ. ವಾಲಿಬಾಲ್ ಕ್ರೀಡಾ ಚಟುವಟಿಕೆಗಳು ಅಮೆರಿಕನ್ನರು ವರ್ಷಕ್ಕೆ ಮೀಸಲಿಡುವ ಹಣ ನಮ್ಮ ಒಟ್ಟು ಕ್ರೀಡೆಯ ಖರ್ಚಿನ 1/5 ಭಾಗ. ಇಷ್ಟಾಗಿಯೂ ಕ್ರೀಡಾ ಕ್ಷೇತ್ರದಲ್ಲಿ ಭಾರತದ ಸಾಧನೆ ಜಗತ್ತನ್ನೇ ನಿಬ್ಬೆರಗು ಗೊಳಿಸಿದೆ" ಎಂದು ಖ್ಯಾತ ವೈದ್ಯರು ಹಾಗೂ ಸಮಾಜಸೇವಾಕರ್ತ ರಾದ ಡಾ. ಸಿ.ಎನ್. ಮೃತ್ಯುಂಜಯಪ್ಪನವರು ಡಿ.ಇಡಿ. ಕಾಲೇಜಿನ ಸುವರ್ಣ ಮಹೋತ್ಸವ ಸಂಸ್ಮರಣ ವಾಲಿಬಾಲ್ ಮತ್ತು ಥ್ರೋಬಾಲ್ ಪಂದ್ಯಾವಳಿಗಳನ್ನು ದಿನಾಂಕ 12.4.2009 ರಂದು ಉದ್ಘಾಟಿಸಿ ನುಡಿದರು.

ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಶೈಲೇಂದ್ರರವರು ಮಾತನಾಡಿ, ಭಾರತದ ಕ್ರೀಡಾಪಟುಗಳಿಗೂ ವಿದೇಶದ ಊಟಕ್ಕೂ ಇರುವ ವ್ಯತ್ಯಾಸವೆಂದರೆ, ವಿದೇಶದ್ದು ತುಷ್ಟಿಗಾಗಿ, ಭಾರತದ್ದು ಪುಷ್ಟಿಗಾಗಿ ಎಂದರು. ಜಯದ ಹಾದಿಯಲ್ಲಿ ಭಾರತದವರು ಸಾಗಲೆಂದು ಸದಾ ಹಾರೈಸುವುದಾಗಿ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿಯಾದ ಪ್ರೊ. ಸಿ. ಸುಬ್ಬಣ್ಣನವರು ಮಾತನಾಡಿ, ಕ್ರೀಡೆಗಳಿಗೆ ವಿದೇಶದಲ್ಲಿ ನೀಡುವಂಥ ಪ್ರೋತ್ಸಾಹ ನಮಗೂ ದೊರಕಿದಂತಾದರೆ ಕ್ರೀಡಾ ಕ್ಷೇತ್ರದಲ್ಲಿ ಭಾರತೀಯರ ಹೆಸರು ಮುಂಚೂಣಿಯಲ್ಲಿ ನಿಲ್ಲಬಲ್ಲದು ಎಂದು ನುಡಿದರು.

ಸಹಾಯಕ ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು ಹಾಗೂ ಸುತ್ತೂರು ಜೆಎಸ್‌ಎಸ್ ಡಿ.ಇಡಿ. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಜಿ.ಎಂ. ಬಸವಣ್ಣನವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಪ್ರಶಿಕ್ಷಣಾರ್ಥಿ ಕು. ಪುಷ್ಪಾರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಪ್ರಶಿಕ್ಷಕರಾದ ಶ್ರೀ ಡಿ.ಎನ್. ಬಸವರಾಜುರವರು ಸ್ವಾಗತಿಸಿದರು; ಶ್ರೀಮತಿ ಕೆ.ಆರ್. ಭ್ರಮರಾಂಬರವರು ವಂದಿಸಿದರು; ಪ್ರಶಿಕ್ಷಕರಾದ ಶ್ರೀಮತಿ ಎಸ್.ಎನ್. ಸೂರ್ಯಪ್ರಭರವರು ಕಾರ್ಯಕ್ರಮವನ್ನು ನಿರೂಪಿಸಿದರು.

***

ಸಂಸ್ಥೆಯ ಸುವರ್ಣ ಮಹೋತ್ಸವದ ಪ್ರಯುಕ್ತ ದಿನಾಂಕ 9.4.2009 ರಂದು ವಿಶೇಷ ಉಪನ್ಯಾಸ ಮಾಲಿಕೆಯನ್ನು ಏರ್ಪಡಿಸಲಾಗಿತ್ತು. ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದ ಮೈಸೂರು ಶಾರದಾವಿಲಾಸ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕರಾದ ಡಾ. ಎಚ್.ಎನ್. ವಿಶ್ವನಾಥ್‌ರವರು "ಜೀವನ ಕೌಶಲಗಳು - ಶೈಕ್ಷಣಿಕ ಪ್ರಾಮುಖ್ಯತೆ" ಎಂಬ ವಿಷಯದ ಬಗ್ಗೆ ಮಾತನಾಡಿ "ಯಾರು ಉತ್ತಮ ಶಿಕ್ಷಕರಾಗಿರುತ್ತಾರೋ ಅವರು ಉತ್ತಮ ವಿದ್ಯಾರ್ಥಿಗಳೂ ಆಗಿರುತ್ತಾರೆ. ಜೀವನಕೌಶಲ ಎಂಬುದು ಒಂದು ಮನೋವೈಜ್ಞಾನಿಕ ಸಾಮರ್ಥ್ಯವಾಗಿದ್ದು ಕೇವಲ ಮಾನಸಿಕ ಕ್ರಿಯೆಗೆ ಒಳಪಟ್ಟಿರುವುದು ಮೃದು ಕೌಶಲ, ದೈಹಿಕ ಪರಿಶ್ರಮದ ಮೂಲಕ ಗಳಿಸಬಹುದಾದಂಥದ್ದು ಕಠಿಣ ಕೌಶಲ" ಎಂದು ತಿಳಿಸಿದರು. ಸುಮಾರು 15 ಅಂಥ ಅಗತ್ಯ ಕೌಶಲಗಳ ಪಟ್ಟಿ ಮಾಡಿ ಅವುಗಳ ಪರಿಕಲ್ಪನೆಗಳನ್ನು ನೀಡುತ್ತಾ ಅವರು "ನಗು, ಮುಖದ ಬೆಲೆಯನ್ನು ಹೆಚ್ಚಿಸುತ್ತದೆ. ಇದು ವಿದ್ಯಾರ್ಥಿಗಳನ್ನು ಸದ್ಗುಣಗಳತ್ತ ಸೆಳೆಯಲು ಶಿಕ್ಷಕನಿಗೆ ಇರುವ ಕೀಲಿಕೈ" ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜೆಎಸ್‌ಎಸ್ ಪ್ರಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಜಿ.ಎಂ. ಬಸವಣ್ಣನವರು ಮಾತನಾಡಿ, ಉಪನ್ಯಾಸಕರು ನೀಡಿದ ಹಿತವಚನದ ಸದುಪಯೋಗವನ್ನು ಎಲ್ಲಾ ಪ್ರಶಿಕ್ಷಕರು ಮತ್ತು ಪ್ರಶಿಕ್ಷಣಾರ್ಥಿಗಳು ತಮ್ಮ ಜೀವನದಲ್ಲಿ ಮತ್ತು ವೃತ್ತಿಯಲ್ಲಿ ಅಳವಡಿಸಿಕೊಳ್ಳಲು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಶಿಕ್ಷಣಾರ್ಥಿ ಶ್ರೀ ಎಂ. ಷಫೀಕ್‌ರವರು ಸ್ವಾಗತಿಸಿದರೆ, ಶ್ರೀಮತಿ ರೋಹಿಣಿಯವರು ವಂದಿಸಿದರು, ಶ್ರೀ ಗಿರೀಶ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು.

ಜೆಎಸ್‌ಎಸ್ ಪ್ರೌಢಶಾಲೆ, ಸುತ್ತೂರು
ನಂಜನಗೂಡು ತಾಲ್ಲೂಕು

ಮಾರ್ಚ್ - 2009 ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ವಿವರಗಳು ಹೀಗಿವೆ:

ವಿವರ	ಕನ್ನಡ ಮಾಧ್ಯಮ	ಆಂಗ್ಲ ಮಾಧ್ಯಮ	ಒಟ್ಟು
ಪರೀಕ್ಷೆಗೆ ಕುಳಿತದ್ದು	393	70	463
ಉತ್ತೀರ್ಣರಾದದ್ದು	366	63	429
ಶೇಕಡಾವಾರು	93	90	93
ಉನ್ನತ ಶ್ರೇಣಿ	09	03	12
ಪ್ರಥಮ ದರ್ಜೆ	188	37	225
ದ್ವಿತೀಯ ದರ್ಜೆ	103	20	123
ತೃತೀಯ ದರ್ಜೆ	66	03	69

ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳ ಭಾವಚಿತ್ರಗಳನ್ನು ಪಕ್ಕದಲ್ಲಿ ಪ್ರಕಟಿಸಿದೆ.

ಸ್ವಾಮಿ ಡಿ.
581 (92.96%)

ಬಸವರಾಜ ನ್ಯಾಮತಿ
576 (92.16%)

ದಿಲೀಪ್‌ಕುಮಾರ್ ಹೆಚ್.ಪಿ.
560 (89.60%)

ನಾಗವೇಣಿ ಸಿ.
555 (88.80%)

ಜಗದೀಶಯ್ಯ ಎಸ್.ಸಿ.
542 (86.72%)

ಮನೋಜ್‌ಕುಮಾರ್ ಎನ್.
553 (88.48%)

ಜೆಎಸ್‌ಎಸ್ ಪ್ರೌಢಶಾಲೆ
ಲಕ್ಷ್ಮೀಪುರಂ (ರಾಮಾನುಜ ರಸ್ತೆ), ಮೈಸೂರು

2008-09ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 204 ವಿದ್ಯಾರ್ಥಿಗಳು ಹಾಜರಾಗಿದ್ದು, 163 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ. 80 ರಷ್ಟು ಫಲಿತಾಂಶ ಲಭಿಸಿದೆ. ಇವರಲ್ಲಿ ಉನ್ನತ ಶ್ರೇಣಿ 3, ಪ್ರಥಮ ಶ್ರೇಣಿ 56, ದ್ವಿತೀಯ ಶ್ರೇಣಿ 55, ತೃತೀಯ ಶ್ರೇಣಿ 49 ಪಡೆದಿರುತ್ತಾರೆ. ಉನ್ನತ ಶ್ರೇಣಿ ಪಡೆದ ವಿದ್ಯಾರ್ಥಿಗಳ ವಿವರ ಹೀಗಿದೆ :

ಪ್ರಸಾದಾರಾಧ್ಯ ವೈ.ಪಿ.
553 (88.48%)

ಅನಿಲ್‌ಕುಮಾರ್ ಡಿ.ಎಸ್.
546 (85.92%)

ಸಿದ್ದರಾಜು ಪಿ.
544 (87.04%)

ಎಂ. ಅಕ್ಷಯ್ ಮಂದಾಕರ್
570 ಶೇ. 91

ಎಸ್.ಎನ್. ಕಾರ್ತಿಕ್
562 ಶೇ. 89

ಎಸ್. ಗುರುಪ್ರಸಾದ್
541 ಶೇ. 87

ಪ್ರಶಾಂತ್ ಸಿ.ಎಂ.
537 (85.92%)

ಶಿವನಗೌಡ ಕೆ. ಪಾಟೀಲ್
535 (85.60%)

ರೇಖಾ ಎಚ್.ಎಸ್.
534 (85.44%)

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ನಂಜನಗೂಡು

ರಾಷ್ಟ್ರಮಟ್ಟದ ಹಿಂದಿ ವಿಚಾರಸಂಕಿರಣ

ದಿನಾಂಕ 4.3.2009 ಮತ್ತು 5.3.2009 ರಂದು ಎರಡು ದಿನಗಳ ರಾಷ್ಟ್ರಮಟ್ಟದ ಹಿಂದಿ ವಿಚಾರ ಸಂಕಿರಣ ಕಾಲೇಜಿನಲ್ಲಿ ನಡೆಯಿತು.

"ಇಂದಿನ ದಿನಗಳಲ್ಲಿ ಬಳಕೆಯ ಹಿಂದಿಯ ಅಧ್ಯಯನ ಮತ್ತು ಅನುವಾದಗಳ ಪ್ರಸ್ತುತತೆ" ಎಂಬ ವಿಷಯವಾಗಿ ಈ ವಿಚಾರಸಂಕಿರಣವು ಆಯೋಜಿತವಾಗಿತ್ತು. ಮೈಸೂರಿನ ಸೆಂಟ್ರಲ್ ಇನ್ಸ್ಸ್ಟಿಟ್ಯೂಟ್ ಆಫ್ ಇಂಡಿಯನ್ ಲಾಂಗ್ವೇಜಸ್‌ನ ನಿರ್ದೇಶಕರಾದ ಪ್ರೊ. ಉದಯ ನಾರಾಯಣ್ ಸಿಂಗ್‌ರವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. "ಬೇರೆ ಬೇರೆ ಕಡೆಗಳಿಂದ ವಿದ್ವಾಂಸರು ಬಂದು ವಿಚಾರಸಂಕಿರಣಗಳಲ್ಲಿ ಪಾಲ್ಗೊಂಡರೆ ಅದು ಹೆಚ್ಚು ಅರ್ಥಪೂರ್ಣವಾಗುತ್ತದೆ. ಪರಸ್ಪರ ಕೊಡುಕೊಳ್ಳುವಿಕೆಗಳು ನಡೆದಾಗ ವಿಭಿನ್ನ ನೆಲೆಗಳಲ್ಲಿ ಸಂಬಂಧ ಸ್ಥಾಪಿತವಾಗಿ ಉತ್ತಮ ಲೇಖಕರು ರಾಷ್ಟ್ರೀಯ ಮಟ್ಟದಲ್ಲಿ ಪರಿಚಯವಾಗಲು ಅವಕಾಶವಾಗುತ್ತದೆ" ಎಂದು ಅವರು ನುಡಿದರು. "ಭಾಷಾಂತರ ಅತ್ಯಂತ ಔಚಿತ್ಯಪೂರ್ಣ ಕ್ರಿಯೆ; ಭಾಷೆಗಳ ನಡುವಣ ಅಂತರವನ್ನು ಕಡಿಮೆ ಮಾಡುವ, ಭಾವನೆಗಳಲ್ಲಿ ಪಾರದರ್ಶಕತೆ ತರುವ ಒಂದು ಅದ್ಭುತ ಪ್ರತಿಭಾಪೂರ್ಣ ಸಾಹಸ" ಎಂದರು.

ಛತ್ತೀಸ್‌ಘಡ್‌ನ ಬಿಲಾಸಪುರದ ಸರ್ಕಾರಿ ಸ್ನಾತಕೋತ್ತರ ಮಹಿಳಾ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು ಹಾಗೂ ಹಿಂದಿ ವಿಭಾಗದ ಮುಖ್ಯಸ್ಥರಾದ ಡಾ. ವಿನಯಕುಮಾರ್ ಪಾಠಕ್‌ರವರು ಮೊದಲಿಗೆ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಬೆಂಗಳೂರಿನ ಕುವೆಂಪು ಭಾಷಾ ಭಾರತಿಯ ಅಧ್ಯಕ್ಷರಾದ ಪ್ರೊ. ಪ್ರಧಾನ್ ಗುರುದತ್ತರವರು "ಪ್ರತಿಯೊಂದು ಭಾಷೆಯೂ ತನ್ನದೇ ಆದ ಶೈಲಿ, ಸೊಗಸನ್ನು ಹೊಂದಿದೆ. ಭಾಷೆಗಳ ನಡುವೆ ತುಲನಾತ್ಮಕ ಅಧ್ಯಯನ ಅತ್ಯವಶ್ಯಕ. ಇದರ ನಡುವೆ ಭಿನ್ನ ಭಾಷಿಕ ಸಾಹಿತ್ಯದ ಕೊಡುಕೊಳ್ಳುವಿಕೆ ನಡೆದಾಗ ಅದ್ಭುತವಾದ ಸಾಹಿತ್ಯ ಸೃಷ್ಟಿಯಾಗಲಿದೆ" ಎಂದರು.

ಮತ್ತೊಬ್ಬ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಹಿಂದಿ ಪ್ರಾಧ್ಯಾಪಕರಾದ ಪ್ರೊ. ತಿಪ್ಪೇಸ್ವಾಮಿಯವರು "ಹಿಂದಿ ಭಾಷೆ ರಾಷ್ಟ್ರಭಾಷೆಯಾದಂತೆ ರಾಜ್ಯದ ಜನಪ್ರಿಯ ಭಾಷೆಯೂ ಆಗಲಿ. ಆ ಭಾಷೆಯ ಶ್ರೇಷ್ಠ ಕೃತಿಗಳು ಇತರ ರಾಜ್ಯದ ಭಾಷೆಗಳಿಗೆ ಭಾಷಾಂತರವಾಗಲಿ. ತನ್ಮೂಲಕ ರಾಷ್ಟ್ರಭಾಷೆ ಜನಮಾನಸದಲ್ಲಿ ಉಳಿಯಲಿ, ಬೆಳೆಯಲಿ" ಎಂದು ಆಶಿಸಿದರು. ಸಭೆಯಲ್ಲಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಸ್. ರತ್ನಶೇಖರರವರು ಹಾಗೂ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎ.ಪಿ. ಮಹದೇವಪ್ಪನವರು, ಸಂಯೋಜಕ ಕಾರ್ಯದರ್ಶಿಗಳಾದ ಪ್ರೊ. ಲೋಕೇಶಮೂರ್ತಿಯವರು ಉಪಸ್ಥಿತರಿದ್ದರು.

ಕುವೆಂಪು ವಿಶ್ವವಿದ್ಯಾನಿಲಯದ ಡಾ. ಉಮಾ ಹೆಗಡೆ, ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯದ ಡಾ. ರಾಮಪ್ರಕಾಶ್, ಮೈಸೂರು ಮಹಾರಾಣಿ ಕಲಾ ಹಾಗೂ ವಾಣಿಜ್ಯ ಕಾಲೇಜಿನ ಡಾ. ವಿ. ಸೌಭಾಗ್ಯಲಕ್ಷ್ಮಿ, ಮೈಸೂರು ಮಹಾರಾಜ ಕಾಲೇಜಿನ ಡಾ. ವಿದ್ಯಾಶ್ರೀ, ಡಾ. ನಾಮದೇವಗೌಡ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಡಾ. ಅಶೋಕ ಕಾಂಬ್ಳೆ ಮತ್ತು ಶ್ರೀಮತಿ ಮನೋರಂಜಿನಿ ಕೋಟಿಮನೆ, ಇಂದೂರಿನ ಅಹಲ್ಯಾ ವಿಶ್ವವಿದ್ಯಾನಿಲಯದ ಪ್ರೊ. ಲಲಿತಾಂಬಾ ದೇವಿ, ಶ್ರೀ ವಾಸುದೇವ ಶೆಟ್ಟಿ, ಬೆಂಗಳೂರಿನ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಜಿ. ಅಶ್ವತ್ಥ ನಾರಾಯಣ, ಜೆಎಸ್‌ಎಸ್ ಮಹಿಳಾ ಕಾಲೇಜಿನ ಹಿಂದಿ ವಿಭಾಗದ ಉಪನ್ಯಾಸಕರಾದ ಶ್ರೀಮತಿ ಶಶಿಕಲಾ ಸುಬ್ಬಣ್ಣ, ಮೈಸೂರು ಮಹಾರಾಣಿ ಕಲಾ, ವಾಣಿಜ್ಯ ಕಾಲೇಜಿನ ಪ್ರೊ. ಅಜ್ರಾ ಬಾನು, ಟೆರೆಷಿಯನ್ ಕಾಲೇಜಿನ ಶ್ರೀಮತಿ ಆರ್.ಎಸ್. ಮಂಗಳಕುಮಾರಿ, ಮೈಸೂರಿನ ರೀಜನಲ್ ಇನ್ಸ್ಸ್ಟಿಟ್ಯೂಟ್ ಆಫ್ ಎಜುಕೇಷನ್‌ನ ಹಿಂದಿ ಉಪನ್ಯಾಸಕರಾದ ಶ್ರೀಮತಿ ಕೆ.ಎಸ್. ಕರುಣಾಲಕ್ಷ್ಮಿ, ಮೈಸೂರಿನ ವಿದ್ಯಾವರ್ಧಕ ಕಾಲೇಜಿನ ಹಿಂದಿ ವಿಭಾಗದ ಮುಖ್ಯಸ್ಥರಾದ ಪ್ರೊ. ಜೆ. ಚಂದ್ರಶೇಖರ್, ಪ್ರೊ. ಬಿ.ಆರ್. ಸುಭದ್ರಾ ರಾವ್, ಪ್ರೊ. ಪರಮೇಶ್ವರ ಹೆಗಡೆ, ಡಾ. ಬಿ.ಎನ್. ಚಂದ್ರಯ್ಯ, ಜೆಎಸ್‌ಎಸ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಮತ್ತು ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಡಾ. ಎಸ್. ಕುಮಾರ್, ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಹಿಂದಿ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ. ಹೆಗಡೆಯವರು, ಬೆಂಗಳೂರು ವಿಶ್ವವಿದ್ಯಾನಿಲಯದ ನಿವೃತ್ತ

ಹಿಂದಿ ಪ್ರಾಧ್ಯಾಪಕರಾದ ಡಾ. ಬಿ.ಜೆ. ಪ್ರಭಾಶಂಕರ ಪ್ರೇಮಿ, ಕಾಲೇಜು ಶಿಕ್ಷಣ ವಿಭಾಗದ ನಿವೃತ್ತ ಪ್ರಾಧ್ಯಾಪಕರು ಮತ್ತು ಜಂಟಿ ನಿರ್ದೇಶಕರಾದ ಡಾ. ಎ. ಜಾನಕಿ, ಮೈಸೂರು ವಿಶ್ವವಿದ್ಯಾನಿಲಯದ ಹಿಂದಿ ವಿಭಾಗದ ಪ್ರಾಧ್ಯಾಪಕರು, ಅಧ್ಯಕ್ಷರು ಹಾಗೂ ಕಲಾ ನಿಕಾಯದ ಡೀನ್ ಆಗಿದ್ದ ಡಾ. ಜೆ.ಎಸ್. ಕುಸುಮಗೀತಾ ಇವರುಗಳು ವಿವಿಧ ವಿಷಯಗಳ ಬಗ್ಗೆ ಮಾತನಾಡಿದರು.

ವಿಚಾರಸಂಕಿರಣದ ಮುಕ್ತಾಯ ಸಮಾರಂಭ ದಿನಾಂಕ 5.3.2009 ರಂದು ಜರುಗಿತು. ರಾಯ್‌ಪುರದ 'ಸದ್ಭಾವನಾ ದರ್ಪಣ' ಪತ್ರಿಕೆಯ ಸಂಪಾದಕರಾದ ಡಾ. ಗಿರೀಶ್ ಪಂಕಜ್‌ರವರು ಸಮಾರೋಪ ಭಾಷಣ ಮಾಡಿದರು. ಕನ್ನಡದಲ್ಲಿರುವ ಅಪಾರ ಸಂಖ್ಯೆಯ ಹಿಂದಿ ಅನುವಾದಕಾರರ ಕುರಿತು ಅಚ್ಚರಿ ವ್ಯಕ್ತಪಡಿಸಿ ತಮ್ಮ ಪತ್ರಿಕೆಯಲ್ಲಿ ಅವರ ಕೃತಿಗಳನ್ನು ಪ್ರಕಟಿಸುವ ಆಶ್ವಾಸನೆ ನೀಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಹಿಂದಿ ಪ್ರಾಧ್ಯಾಪಕರಾದ ಡಾ. ಎಂ.ಎಸ್. ಕೃಷ್ಣಮೂರ್ತಿಯವರು ಎಲ್ಲಾ ಭಾಷಿಕರು ಒಂದೇ ವೇದಿಕೆಯನ್ನು ಹಂಚಿಕೊಂಡಿರುವುದರಿಂದ ಇದು ಒಂದು ಅಪೂರ್ವವಾದ ಗೋಷ್ಠಿಯಾಗಿದೆ. ಅನುವಾದವು ಭಾಷೆಯ ಪರಿಸರಕ್ಕೆ ತಕ್ಕಂತೆ ಹೊಂದಿಕೊಳ್ಳುವಂತಿರಬೇಕೆಂದರು. ಪ್ರೊ. ಆನಂದರಾವ್, ಡಾ. ನಿರ್ಮಲರವರು ವಿಚಾರಸಂಕಿರಣದಲ್ಲಿನ ಅನುಭವವನ್ನು ಹಂಚಿಕೊಂಡರು.

ಇತಿಹಾಸ ವಿಭಾಗ

ಬೆಂಗಳೂರಿನ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ಸಹಯೋಗದಲ್ಲಿ ಯುಜಿಸಿ ಪ್ರಾಯೋಜಿತ ರಾಜ್ಯಮಟ್ಟದ ವಿಚಾರ ಸಂಕಿರಣ ದಿನಾಂಕ 7.3.2009 ರಂದು ನಡೆಯಿತು. ವಿಷಯ: "ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಸಾಂಸ್ಕೃತಿಕ ಸ್ಥಿತ್ಯಂತರ".

ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಿ.ಆರ್. ಜಯರಾಮರಾಜೇ ಅರಸ್ ಅವರು ವಿಚಾರಸಂಕಿರಣದಲ್ಲಿ ಮಂಡನೆಯಾಗುವ ಎಲ್ಲ ಪ್ರಬಂಧಗಳನ್ನು ಪುಸ್ತಕರೂಪದಲ್ಲಿ ತರಬೇಕೆಂದು ಆಶಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರ ಜೀವನ ಅವರ ಆಡಳಿತಾತ್ಮಕ ವಿಷಯಗಳನ್ನು ಪ್ರಸ್ತಾಪಿಸಿದ ಅವರು "ಅಧಿಕಾರವನ್ನು ಕಳೆದು ಕೊಂಡು ಅರಮನೆಗೆ ಸೀಮಿತವಾದ ತಮ್ಮ ರಾಜಕೀಯ ಬದುಕಿನಲ್ಲಿ ಸಾಂಸ್ಕೃತಿಕ, ಸಾಹಿತ್ಯಿಕ, ಶಿಲ್ಪ ಮೊದಲಾದ ವಿಷಯಗಳಿಗೆ ವಿಶೇಷ ಪ್ರಾಶಸ್ತ್ಯ ನೀಡಿದ ಒಡೆಯರ್‌ರವರು ಸ್ವತಃ ಕವಿಗಳು, ದಾನಿಗಳು ಆಗಿದ್ದರು. ಬ್ರಾಹ್ಮಣ, ವೀರಶೈವ ಸಮುದಾಯಕ್ಕೆ ಅಪಾರ ಸಹಾಯಧನವನ್ನು ನೀಡಿದರು" ಎಂದರು.

ಆಶಯಭಾಷಣ ಮಾಡಿದ ಬೆಂಗಳೂರಿನ ಇಂದಿರಾ ಗಾಂಧಿ ನ್ಯಾಷನಲ್ ಸೆಂಟರ್ ಫಾರ್ ಆರ್ಟ್ಸ್‌ನ ದಕ್ಷಿಣ ಪ್ರಾದೇಶಿಕ ಕೇಂದ್ರದ ಗೌರವ ನಿರ್ದೇಶಕರಾದ ಪ್ರೊ. ಎಸ್. ಶೆಟ್ಟರ್‌ರವರು "ಇತಿಹಾಸದಲ್ಲಿ ಯಾರು ಜಯಶಾಲಿಗಳಾಗುತ್ತಾರೆಯೋ ಅವರೇ ಶ್ರೇಷ್ಠ ವ್ಯಕ್ತಿಗಳೂ ಆಗುತ್ತಾರೆ" ಎಂದರು. "ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲ ಅಪೂರ್ವವಾದ ಕಾಲ; ಹಾಗೆಯೇ ಅಂಧಕಾರದ ಕಾಲವೂ ಹೌದು. ಸಾಮಾಜಿಕ ಅಂತರವನ್ನು ದಾಟದ ಹೊರತು ಜನಸಮುದಾಯ ಜಡತ್ವದಿಂದ ಪಾರಾಗಲು ಸಾಧ್ಯವಿಲ್ಲ. ಒಡೆಯರು ಅಧಿಕಾರವನ್ನು ಕಳೆದುಕೊಂಡ ನಂತರವೂ ಪ್ರಜಾನು ರಾಗವನ್ನು ಉಳಿಸಿಕೊಂಡು ಬೆಳೆದ ವಿಶಿಷ್ಟ ರಾಜರು" ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಉಷಾ ಸುರೇಶ್ ರವರು ತಮ್ಮ ಇಲಾಖೆಯಲ್ಲಿ 300 ವರ್ಷಗಳ ಅವಧಿಯ, 20 ಲಕ್ಷಕ್ಕೂ ಹೆಚ್ಚು ದಾಖಲೆಗಳಿವೆ. ಸಂಶೋಧಕರು, ಸಾರ್ವಜನಿಕರು ಈ ವಿಭಾಗದ ಸದುಪಯೋಗ ಪಡೆದುಕೊಳ್ಳ ಬೇಕೆಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಶ್ರೀ ಬಿ.ಎನ್. ಬೆಟ್‌ಕೆರೂರ್‌ರವರು ಅಧ್ಯಕ್ಷ ಭಾಷಣವನ್ನು ಮಾಡಿದರು. ಇತಿಹಾಸ ವಿಭಾಗದ ಅಧ್ಯಾಪಕರು ಹಾಗೂ ತಜ್ಞರುಗಳಾದ ಪ್ರೊ. ನಯೀಮುರ್ ರಹಮಾನ್ (ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೈಸೂರು), ಡಾ. ಎಸ್. ನರೇಂದ್ರಪ್ರಸಾದ್ ಮತ್ತು ಪ್ರೊ. ಬಿ. ಪರಮೇಶ್ವರ (ಜೆಎಸ್‌ಎಸ್ ಕಾಲೇಜು), ಡಾ. ಎನ್.ಎಸ್. ರಂಗರಾಜು (ಮೈಸೂರು ವಿಶ್ವವಿದ್ಯಾನಿಲಯ), ಡಾ. ಪಿ.ವಿ. ನಂಜರಾಜ ಅರಸ್ (ವಿಶ್ರಾಂತ ಪ್ರಾಧ್ಯಾಪಕರು, ಮಹಾರಾಜ ಕಾಲೇಜು), ಡಾ. ನಿರ್ಮಲರಾಜು (ಮಹಾರಾಜ ಕಾಲೇಜು), ಡಾ. ಸುಶೀಲಾ ಅರಸ್ (ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ), ಡಾ. ರವಿಕುಮಾರ್ (ಸಂಶೋಧಕರು, ಮೈಸೂರು ವಿಶ್ವವಿದ್ಯಾನಿಲಯ) ಇವರುಗಳು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಸಾಮಾಜಿಕ, ಸಾಂಸ್ಕೃತಿಕ, ಚಿತ್ರಕಲೆ, ದಸರಾ, ವಾಸ್ತುಶಿಲ್ಪ, ಸಾಹಿತ್ಯಿಕ ಪತ್ರಗಳು ಮೊದಲಾದ ವಿಷಯಗಳನ್ನು ಕುರಿತು ಪ್ರಬಂಧ ಮಂಡಿಸಿದರು. ಡಾ. ಎಸ್. ನರೇಂದ್ರಪ್ರಸಾದ್ ಹಾಗೂ ಡಾ. ನಾಗರಾಜಪ್ಪನವರು ವಿಚಾರಸಂಕಿರಣದ ಸಮನ್ವಯಕಾರರಾಗಿದ್ದರು.

ಅದೇ ದಿನ ನಡೆದ ಸಮಾರೋಪ ಸಮಾರಂಭದ ಮುಖ್ಯ ಭಾಷಣಕಾರರಾದ ಬೆಂಗಳೂರಿನ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಉಷಾ ಸುರೇಶ್‌ರವರು, ರಾಜ್ಯ ಪತ್ರಾಗಾರ ಇಲಾಖೆಯ ಬಾಗಿಲು ಸಂಶೋಧಕರಿಗೆ ಸದಾ ತೆರೆದಿರುತ್ತದೆ. ಪ್ರಾಚೀನ ದಾಖಲೆಗಳ ಹಸ್ತಪ್ರತಿಗಳ ಸಂರಕ್ಷಣೆ ಇಲಾಖೆಯ ಜವಾಬ್ದಾರಿಯಾಗಿದೆ. ಖಾಸಗಿಯವರು ಇದನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊರುವುದಾದರೆ ಇಲಾಖೆಯು ಸಹಾಯಧನ ನೀಡಲು ಸಿದ್ಧವೆಂದರು. ಲಂಡನ್ನಿನಲ್ಲಿರುವ ಹಲವಾರು ಪ್ರಮುಖ ಭಾರತೀಯ ಐತಿಹಾಸಿಕ ದಾಖಲೆಯನ್ನು ಇಲಾಖೆಯು ಪಡೆದುಕೊಳ್ಳುವ ಯತ್ನದಲ್ಲಿ ಯಶಸ್ವಿಯಾಗಲಿದೆ ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಚಾಮರಾಜನಗರ ಬಿಜೆಪಿ ಧುರೀಣರು ಹಾಗೂ ಅರಣ್ಯವಸತಿಗೃಹಗಳ ಮಂಡಳಿಯ ಅಧ್ಯಕ್ಷರಾದ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪನವರು ಜಾಗತಿಕಭೂಪಟದಲ್ಲಿ ಮೈಸೂರು ವಿಶೇಷ ಸ್ಥಾನ ಪಡೆಯಲು ಮುಮ್ಮಡಿ ಕೃಷ್ಣರಾಜ ಒಡೆಯರು ಕೊಡುಗೆ ಕಾರಣವೆಂದರು.

ಸಂಸ್ಕೃತ ವಿಭಾಗ

ದಿನಾಂಕ 23.3.2009 ರಂದು ನಡೆದ ವಿಶೇಷ ಉಪನ್ಯಾಸ ಮಾಲಿಕೆಯಲ್ಲಿ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಮಹಾರಾಜ ಕಾಲೇಜಿನ ಸಂಸ್ಕೃತ ಉಪನ್ಯಾಸಕರಾದ ವಿದ್ವಾನ್ ಡಾ. ಕೆ.ಎಸ್. ಮಹದೇವಯ್ಯನವರು ಪಂಚಮಹಾಕಾವ್ಯಗಳ ಬಗ್ಗೆ ಮಾತನಾಡಿದರು. ಮಹಾಕವಿ ಕಾಳಿದಾಸ ಹಾಗೂ ಮಾಘ ಇವರ ಕೃತಿಗಳ ಬಗ್ಗೆ ವಿದ್ವತ್ಪೂರ್ಣವಾಗಿ ವಿವರಿಸಿ, ವಿದ್ಯಾರ್ಥಿಗಳ ಮನಸೆಳೆದರು. ಪ್ರಾಂಶುಪಾಲರಾದ ಪ್ರೊ. ಎಸ್. ರತ್ನಶೇಖರ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಗಣಿತಶಾಸ್ತ್ರ ವಿಭಾಗ

ದಿನಾಂಕ 24.3.2009 ರಂದು ವಿಶೇಷ ಉಪನ್ಯಾಸ ಕಾರ್ಯ ಕ್ರಮವನ್ನು ಏರ್ಪಡಿಸಲಾಗಿತ್ತು. ಮೈಸೂರು ವಿಶ್ವವಿದ್ಯಾ ನಿಲಯದ ನಿವೃತ್ತ ಗಣಿತಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ. ಎಸ್. ಕಿರಣಗಿಯವರು 'ಗಣಿತಶಾಸ್ತ್ರದಲ್ಲಿ ಕೆಲವು ಸಾಧನೆಗಳು ಮತ್ತು ಸವಾಲುಗಳು' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಗಣಿತ ತಜ್ಞರು ಹೇಗೆ ಕಷ್ಟಕರವಾದ ಸಮಸ್ಯೆಗಳನ್ನು ಬಿಡಿಸಿ ಅದರ ಮೂಲಕ ಭೌತವಿಜ್ಞಾನದ ಕೆಲವು ಸಮಸ್ಯೆಗಳಿಗೆ ಪರಿಹಾರ ನೀಡಿದರು ಎಂಬುದನ್ನು ಮನಮುಟ್ಟುವಂತೆ ವಿವರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ. ಎಸ್. ರತ್ನಶೇಖರರವರು ವಹಿಸಿದ್ದರು.

ಭೌತಶಾಸ್ತ್ರ ವಿಭಾಗ

ವಿಭಾಗವು ದಿನಾಂಕ 30.3.2009 ರಂದು ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜಿನ ನಿವೃತ್ತ ಭೌತಶಾಸ್ತ್ರ ಪ್ರಾಧ್ಯಾಪಕ ರಾದ ಡಾ. ಬಿ.ವಿ. ಸದಾಶಿವಮೂರ್ತಿಯವರು ನಡೆಸಿಕೊಟ್ಟರು. "ವರ್ಲ್ಡ್ ಆಫ್ ಫ್ಯಾಸಿನೇಟಿಂಗ್ ಮೆಟೀರಿ ಯಲ್ಸ್ ಅಪ್‌ಟು ನ್ಯಾನೋ ಮೆಟೀರಿಯಲ್" ಎಂಬ ಬಗ್ಗೆ ಸುದೀರ್ಘ ಉಪನ್ಯಾಸ ನೀಡಿದರು. ಮೆಮ್ಸ್, ರೋಬೋಟ್ಸ್ ಸ್ಮಾರ್ಟ್ ಮೆಟೀರಿಯಲ್, ನ್ಯಾನೋ ಮೆಟೀರಿಯಲ್ಸ್ ಉಪಯುಕ್ತ ಬಗ್ಗೆ ಮಾಹಿತಿ ನೀಡಿದರು. ಪ್ರಾಂಶುಪಾಲರಾದ ಪ್ರೊ. ಎಸ್. ರತ್ನಶೇಖರರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಬುದ್ಧ ಸಂಸ್ಮರಣೆ

ದಿನಾಂಕ 31.3.2009 ರಂದು ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿರುವ ಬುದ್ಧ ಅಧ್ಯಯನ ಕೇಂದ್ರ ಮತ್ತು ನಂಜನಗೂಡಿನ ಜೆಎಸ್‌ಎಸ್ ಪದವಿ ಕಾಲೇಜುಗಳ ಸಂಯುಕ್ತ ಆಶ್ರಯದಲ್ಲಿ ಬುದ್ಧನ ಕುರಿತಂತೆ ವಿಶೇಷ ಉಪನ್ಯಾಸ ಮಾಲಿಕೆಯನ್ನು ಆಯೋಜಿಸಲಾಗಿತ್ತು. ಮೈಸೂರಿನ ಡಿ. ಬನುಮಯ್ಯ ಕಾಲೇಜಿನ ನಿವೃತ್ತ ಪ್ರಾಚಾರ್ಯರಾದ ಪ್ರೊ. ಎನ್. ಶಿವಾಜಿ ಜೋಯಿಸ್‌ರವರು ಬುದ್ಧನ ಮಹಾಪರಿ ನಿರ್ವಾಣದ ವಿವರಗಳನ್ನು ನೀಡಿದರಲ್ಲದೆ, ಬುದ್ಧನ ಅಂತಿಮ ದಿನಗಳು ಮತ್ತು ಆತನು ಜಗತ್ತಿಗೆ ನೀಡಿದ ಸಂದೇಶವನ್ನು ಪರಿಚಯಿಸಿದರು.

ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿವೃತ್ತ ಸಂಶೋಧಕರಾದ ವಿದ್ವಾನ್ ಶ್ರೀ ಎಚ್. ವಿ. ನಾಗರಾಜರಾವ್ ರವರು ಸಿದ್ಧಾರ್ಥ ಬುದ್ಧನಾದ, ಲೌಕಿಕತೆಯಿಂದ ಅಲೌಕಿ ಕತೆಯೆಡೆಗೆ ಸಾಗಿದ, ಜಗತ್ತಿನ ಉದ್ಧಾರಕ್ಕಾಗಿ ಹೊಸ ಬೆಳಕನ್ನು ಕಂಡ, ಆ ಬೆಳಕನ್ನು ಜಗತ್ತಿಗೆ ಉಣಬಡಿಸಿದ, ಮಹಾನ್ ಸಂತನ ಜೀವನವನ್ನು ಆಕರ್ಷಕವಾಗಿ ನಿರೂಪಿಸಿ, ಅವನ ಹಿಂದಿನ ಜನ್ಮದ ಕಥಾ ಗುಚ್ಛವಾದ 'ಜಾತಕಮಾಲಾ'ಕೃತಿಯ ಪರಿಚಯಮಾಡಿಕೊಟ್ಟರು. ಪ್ರಾಂಶುಪಾಲ ರಾದ ಪ್ರೊ. ಎಸ್. ರತ್ನಶೇಖರರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಬುದ್ಧ ಅಧ್ಯಯನ ಕೇಂದ್ರದ ಸಂಯೋಜಕರಾದ ಪ್ರೊ. ಎಂ. ವಿಶ್ವನಾಥ್‌ರವರು ಸ್ವಾಗತಿಸಿದರು. ಪ್ರೊ. ಎಂ.ಸಿ. ಸರೋಜಮ್ಮಣ್ಣಿಯವರು ಕಾರ್ಯಕ್ರಮವನ್ನು ನಿರೂಪಿಸಿದರು.

ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆ, ಮೈಸೂರು

ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆಯು ತನ್ನ ಸಹಯೋಗ ಸಂಸ್ಥೆಗಳಾದ ಸಮತಾ ಅಧ್ಯಯನ ಕೇಂದ್ರ ಹಾಗೂ ಶಕ್ತಿಧಾಮದ ಆವರಣದಲ್ಲಿ ದಿನಾಂಕ 22.3.2009 ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿತು. ಚಲನಚಿತ್ರ ಕಲಾವಿದೆ ಶ್ರೀಮತಿ ಚಿತ್ರಾ ಶೆಣೈರವರು ಆಗಮಿಸಿ ಸಮಾರಂಭವನ್ನು ಉದ್ಘಾಟಿಸಿದರು. ಮೈಸೂರು ನಗರ ಪೊಲೀಸ್ ಆಯುಕ್ತರಾದ ಡಾ. ಎಸ್. ಪರಶಿವಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಶ್ರೀ ಬಿ.ಎನ್. ಬೆಟ್‌ಕೆರೂರ್‌ರವರು, ಖ್ಯಾತ ಲೇಖಕಿ ಡಾ. ವಿಜಯಾ ದಬ್ಬೆಯವರು, ನಗರದ ಪ್ರಸಿದ್ಧ ವೈದ್ಯರು ಹಾಗೂ ಶಕ್ತಿಧಾಮದ ಟ್ರಸ್ಟಿಗಳೂ ಆದ ಡಾ. ಕಮಲಾ ರಾಮನ್‌ರವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಶ್ರೀಮತಿ ಚಿತ್ರಾ ಶೆಣೈರವರು, "ಸಾಮಾನ್ಯವಾಗಿ ಹೆಣ್ಣುಮಕ್ಕಳು ಒಟ್ಟಾಗಿ ಸೇರಿ ಪ್ರಗತಿಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಅಪರೂಪದ ವಿಚಾರ. ಆದರೆ ಈ ಸಂಸ್ಥೆಗಳು ನಡೆಸುತ್ತಿರುವ ಚಟುವಟಿಕೆಗಳನ್ನು ನೋಡಿದಾಗ ಇವು ಮಹಿಳೆಯರಿಗೆ ಒಂದು ಅಪೂರ್ವ ಶಕ್ತಿಯನ್ನು ತಂದುಕೊಟ್ಟಿವೆ ಎಂದರೆ ಉತ್ಪ್ರೇಕ್ಷೆಯಾಗುವುದಿಲ್ಲ. ನಿಮ್ಮೆಲ್ಲರಿಗೂ ಒಳ್ಳೆಯದಾಗಲಿ ಎಂದು ಹಾರೈಸುತ್ತೇನೆ" ಎಂದು ನುಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಬಿ.ಎನ್. ಬೆಟ್‌ಕೆರೂರ್‌ರವರು ತಮ್ಮ ಭಾಷಣದಲ್ಲಿ "ಸಮಾಜದ ಅತಿ ವಂಚಿತ ವರ್ಗದ ಹೆಣ್ಣುಮಕ್ಕಳು ಇಲ್ಲಿ ಒಗ್ಗಟ್ಟಿನಿಂದ ಬಾಳುತ್ತ, ತಮ್ಮ ಮುಂದಿನ ಜೀವನಕ್ಕೆ ಮಾರ್ಗೋಪಾಯವನ್ನು ಹುಡುಕುತ್ತ, ಒಂದು ಸುಭದ್ರ ನೆಲೆಯನ್ನು ಕಂಡುಕೊಳ್ಳುತ್ತಿರುವುದು ನಿಜಕ್ಕೂ ಪ್ರಶಂಸನೀಯ ವಿಚಾರವಾಗಿದೆ. ಈ ದಿಸೆಯಲ್ಲಿ ನಮ್ಮ ಅಂಗಸಂಸ್ಥೆಯಾದ ಜನಶಿಕ್ಷಣ ಸಂಸ್ಥೆಯು ಕೈ ಜೋಡಿಸಿ ದುಡಿಯುತ್ತಿರುವುದು ನಮಗೆ ಹೆಮ್ಮೆ ತರುವ ವಿಚಾರವಾಗಿದೆ" ಎಂದು ನುಡಿದರು.

ತಮ್ಮ ಅಧ್ಯಕ್ಷ ಭಾಷಣದಲ್ಲಿ ಡಾ. ಎಸ್. ಪರಶಿವಮೂರ್ತಿಯವರು "ನಮ್ಮ ಸಮಾಜವು ಇತ್ತೀಚೆಗೆ ವಿದ್ಯಾವಂತ ಸಮಾಜವಾಗಿ ಬೆಳೆದಿದ್ದರೂ ಸಹ, ಇದರ ಪ್ರಮುಖ ಭಾಗವಾಗಿರುವ ಹೆಣ್ಣುಮಕ್ಕಳನ್ನು ಸಮಾನವಾಗಿ ನೋಡುವ ಭಾವನೆ ಇನ್ನೂ ಮೂಡಿಬಂದಿಲ್ಲ; ಇವರು ಪುರುಷರಿಗಿಂತ ಕಡಿಮೆಯೆಂಬ ಭಾವನೆ ಇಂದಿಗೂ ಇದೆ. ಇದು ಸಮಾಜದಲ್ಲಿನ ಒಂದು ವ್ಯಾಧಿ. ಮತ್ತೊಂದು ಜೀವಿಯನ್ನು ಸಮಾನವಾಗಿ, ಗೌರವವಾಗಿ ನಡೆಸಿಕೊಳ್ಳದೆ ಹೋದಲ್ಲಿ ನಾವು ಅಯೋಗ್ಯರು ಎನಿಸಿಕೊಳ್ಳುತ್ತೇವೆ. ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಹೆಣ್ಣಿಗೆ ಸಮಾನ ಬದುಕನ್ನು ನೀಡಿದ್ದಾರೆ. ನಮ್ಮ ಸಂಸ್ಕೃತಿಯಲ್ಲಿ ಹೆಣ್ಣಿಗೆ ಅತಿ ಹೆಚ್ಚಿನ ಗೌರವ ನೀಡಿ ಹೊಗಳಿದ್ದರೂ ಸಹ ಇದು ಬರಿ ವೇದಿಕೆಗೆ ಭೂಷಣವಾಗುವ ಮಾತುಗಳಾಗಿದ್ದು, ನೈಜ ಅರ್ಥದಲ್ಲಿ ಅಂಥ ಸಮಾನತೆ ಮತ್ತು ಗೌರವ ಅವರಿಗೆ ಇನ್ನೂ ದೊರೆತಿಲ್ಲ. ಅವರು ಉತ್ತಮ ಬದುಕನ್ನು ರೂಪಿಸಿಕೊಂಡು ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆತು, ಬದುಕಿದಾಗ ಮಾತ್ರ ಸಮಾಜ ಮುನ್ನಡೆಯ ದಾರಿಯಲ್ಲಿ ಸಾಗುತ್ತದೆ" ಎಂದು ನುಡಿದರು.

ಕಾರ್ಯಕ್ರಮದ ಮೊದಲಿಗೆ ಶಕ್ತಿಧಾಮದ ನಿವಾಸಿಗಳಿಂದ ಪ್ರಾರ್ಥನೆ ನಡೆಯಿತು. ಜನಶಿಕ್ಷಣ ಸಂಸ್ಥೆಯ ನಿರ್ದೇಕರಾದ ಶ್ರೀ ಚನ್ನಬಸಪ್ಪನವರು ಎಲ್ಲರನ್ನೂ ಸ್ವಾಗತಿಸಿದರು. ಸಮತಾ ಅಧ್ಯಯನ ಕೇಂದ್ರದ ಶ್ರೀಮತಿ ಎಂ.ಎನ್. ಸುಮನಾರವರು ವಂದನೆ ಸಲ್ಲಿಸಿದರು. ಸಮತಾ ಅಧ್ಯಯನ ಕೇಂದ್ರದ ಶ್ರೀ ಎಂ.ಸಿ. ಸತೀಶ್‌ರವರು ಕಾರ್ಯಕ್ರಮ ನಿರೂಪಿಸಿದರು. ಮಧ್ಯಾಹ್ನಾನಂತರ ಸಮಾರಂಭದಲ್ಲಿ ಭಾಗವಹಿಸಿದ್ದ ಮಹಿಳಾ ಪ್ರತಿನಿಧಿಗಳಿಗೆ, 'ಸ್ಫೂರ್ತಿ ನೀಡಿದ ಮಹಿಳೆ' ಎಂಬ ವಿಷಯ ಕುರಿತು ಕಿರು ಭಾಷಣ ಸ್ಪರ್ಧೆಯನ್ನು, ಮಹಿಳೆಯರನ್ನು ಕುರಿತ ಗಾದೆಗಳನ್ನು ವಿಸ್ತರಿಸಿ ಮಾತನಾಡುವ ಸ್ಪರ್ಧೆಯನ್ನು ಹಾಗೂ ಮಹಿಳಾಪರ ಆಶಯವುಳ್ಳ ಗೀತಗಾಯನ ಸ್ಪರ್ಧೆಯನ್ನೂ ಸಹ ಏರ್ಪಡಿಸಿದ್ದು, ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಉಪ ವಿಭಾಗಾಧಿಕಾರಿಗಳಾದ ಶ್ರೀಮತಿ ಗುರುಮಿತ್ ತೇಜರವರು ಆಗಮಿಸಿ, ಮಹಿಳೆಯರನ್ನು ಉದ್ದೇಶಿಸಿ ಮಾತನಾಡಿದರು.

ಸುತ್ತೂರಿಗೆ ರಾಷ್ಟ್ರಪತಿಗಳ ಭೇಟಿ

ದಿನಾಂಕ 9.5.2009 ಸುತ್ತೂರಿನ ಪಾಲಿಗೆ ಒಂದು ಐತಿಹಾಸಿಕ ದಿನ. ಅಂದು ರಾಷ್ಟ್ರಪತಿ ಶ್ರೀಮತಿ ಪ್ರತಿಭಾ ದೇವಿಸಿಂಗ್ ಪಾಟೀಲ್‌ರವರು ಸುತ್ತೂರು ಕ್ಷೇತ್ರಕ್ಕೆ ಮೊತ್ತಮೊದಲ ಭೇಟಿ ನೀಡಿದರು. ಅಂದು ಅವರು ಸುತ್ತೂರಿನ ಉಚಿತ ಶಾಲೆಯ ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯದ ಕಟ್ಟಡವನ್ನು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಅವರು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ರಜತ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ "ಸಮರ್ಥ ಗ್ರಾಮೀಣ ಆರೋಗ್ಯಾಭಿವೃದ್ಧಿ" ವಿಚಾರ ಸಂಕಿರಣಕ್ಕೆ ಚಾಲನೆ ನೀಡಿದರು. ರಾಜ್ಯಪಾಲರಾದ ಶ್ರೀ ರಾಮೇಶ್ವರ ಠಾಕೂರ್ ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಸುತ್ತೂರು ಶ್ರೀಕ್ಷೇತ್ರದ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಮತ್ತು ಸಿದ್ಧಗಂಗಾ ಶ್ರೀಕ್ಷೇತ್ರದ ಡಾ. ಶಿವಕುಮಾರ ಸ್ವಾಮೀಜಿಯವರ ದಿವ್ಯ ಸಮ್ಮುಖದಲ್ಲಿ ಈ ಕಾರ್ಯಕ್ರಮ ನಡೆಯಿತು. ಭಾಷಣದ ಕೆಲವು ಆಯ್ದ ಭಾಗಗಳು ಹೀಗಿವೆ:

ಶ್ರೀಮತಿ ಪ್ರತಿಭಾ ದೇವಿಸಿಂಗ್ ಪಾಟೀಲ್

"ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಸೌಲಭ್ಯವಂಚಿತ ಅಸಂಘಟಿತ ವರ್ಗದ ಜನರಿಗೆ ಮೂಲಭೂತ ಆರೋಗ್ಯ ಸೌಕರ್ಯಗಳು ದೊರೆಯಬೇಕಾದುದು ಇಂದಿನ ಆದ್ಯತೆ" ಎಂದು ಶ್ರೀಮತಿ ಪ್ರತಿಭಾ ಪಾಟೀಲ್‌ರವರು ನುಡಿದರು. ಹಾಗೆಯೇ ನಮ್ಮ ಶಾಲಾ ಕಾಲೇಜುಗಳಲ್ಲಿ ರ್‍ಯಾಗಿಂಗ್ ಪಿಡುಗನ್ನು ನಿವಾರಿಸಲು ಶಾಸನವನ್ನು ತರುವುದು ಅಗತ್ಯ ಎಂದೂ ಅಭಿಪ್ರಾಯಪಟ್ಟರು. ಇಂಥ ಅಮಾನವೀಯ ಘಟನೆಗಳಿಂದ ಹಲವಾರು ಪೋಷಕರು ತಮ್ಮ ಮಕ್ಕಳನ್ನು ಕಳೆದುಕೊಳ್ಳುವಂಥ ಭೀಕರ ವಾತಾವರಣ ನಿರ್ಮಾಣವಾಗಿದೆ. ಈಗ ಕಾಲೇಜು ಆವರಣಗಳನ್ನು ಭಯಮುಕ್ತ ವಾಗಿ ಮಾಡುವಂಥ ದೊಡ್ಡ ಹೊಣೆಗಾರಿಕೆ ಪೋಷಕರು, ಶಿಕ್ಷಕರು, ಆಡಳಿತಮಂಡಳಿಗಳು, ವಿಶ್ವವಿದ್ಯಾನಿಲಯಗಳು ಮತ್ತು ಸರ್ಕಾರಗಳ ಮೇಲಿದೆ" ಎಂದರು.

ಶ್ರೀ ರಾಮೇಶ್ವರ ಠಾಕೂರ್

"ಸುತ್ತೂರು ಶ್ರೀಮಠವು ಶಿಕ್ಷಣದ ಕ್ಷೇತ್ರದಲ್ಲಿ ಅನುಪಮವಾದ ಸಾಧನೆ ಮಾಡುತ್ತಿದ್ದು ಶ್ರೀ ಬಸವೇಶ್ವರರು ಹಾಕಿಕೊಟ್ಟ ಅನನ್ಯವಾದ ಹಾದಿಯಲ್ಲಿ ಮುನ್ನಡೆಯುತ್ತಿದೆ. ಇಂದು ಉದ್ಘಾಟನೆಯಾಗಿರುವ ವಿದ್ಯಾರ್ಥಿನಿಲಯದಿಂದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ತುಂಬ ಉಪಯೋಗವಾಗುತ್ತದೆ. ಇದರಿಂದ

ಹೆಣ್ಣುಮಕ್ಕಳು ಸಮಾನತೆ ಯನ್ನು ಗಳಿಸಿಕೊಂಡು ಸಮಾಜದ ಮುಖ್ಯ ವಾಹಿನಿಯಲ್ಲಿ ಬೆರೆಯಲು ಸಾಧ್ಯವಾಗುತ್ತದೆ" ಎಂದರು. ಸುತ್ತೂರಿನ 'ಮಾದರಿ ಆರೋಗ್ಯ ಗ್ರಾಮ' ಯೋಜನೆಯು ಗ್ರಾಮೀಣ ಆರೋಗ್ಯ ಕ್ಷೇತ್ರದಲ್ಲಿ ಒಂದು ವಿನೂತನ ಪ್ರಯೋಗವೆಂದು ಅವರು ಶ್ರೀಮಠವನ್ನು ಪ್ರಶಂಸಿಸಿದರು.

ಶ್ರೀ ಬಿ.ಎಸ್. ಯಡಿಯೂರಪ್ಪನವರು

ರಾಜ್ಯ ಸರ್ಕಾರವು ಇತ್ತೀಚೆಗೆ ಜಾರಿಗೆ ತಂದಿರುವ 'ಆರೋಗ್ಯ ಕವಚ' ಯೋಜನೆಯ ಅನ್ವಯ, ತುರ್ತು ಸಂದರ್ಭಗಳಲ್ಲಿ ಅಂಬ್ಯುಲೆನ್ಸ್ ಮತ್ತು ಚಿಕಿತ್ಸೆಗೆ ನೆರವು ದೊರೆಯುತ್ತಿದ್ದು ಕಳೆದ ಆರು ತಿಂಗಳಲ್ಲಿ ಸುಮಾರು 40,000 ಜನರು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ನುಡಿದರು.

ಶಿಕ್ಷಣ ಕ್ಷೇತ್ರ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಜೆಎಸ್‌ಎಸ್ ಸಂಸ್ಥೆಯು ಹಲವಾರು ವಿಶೇಷ ಕ್ರಮಗಳನ್ನು ಕೈಗೊಂಡಿದೆ. ಸುತ್ತೂರು ಗ್ರಾಮಕ್ಕೆ ವಿಶೇಷ ಆರೋಗ್ಯ ಪ್ಯಾಕೇಜ್‌ನ ಲಾಭ ದೊರಕಿದೆ. ಗ್ರಾಮೀಣ ಆರೋಗ್ಯಾಭಿವೃದ್ಧಿಯ ಸಂಕಿರಣವು ಇಂಥ ಅನುಭವ ಗಳನ್ನು ಹಂಚಿಕೊಳ್ಳಲು ವೇದಿಕೆಯಾಗಲಿ ಎಂದು ಆಶಿಸಿದರು.

ಪೂಜ್ಯ ಶ್ರೀಗಳವರು

12 ನೆಯ ಶತಮಾನದಲ್ಲಿ ಕರ್ನಾಟಕವು ಕಂಡ ಶರಣ ಚಳವಳಿಯು ಮಹಿಳಾ ಸಮಾನತೆಗೆ ಸಮರ್ಥವಾದ ವೇದಿಕೆಯನ್ನು ಪ್ರಾಯಶಃ ಮೊದಲ ಬಾರಿಗೆ ಒದಗಿಸಿತು. ಮಹಿಳೆ ಪುರುಷನಿಗೆ ಸಮಾನವಷ್ಟೇ ಅಲ್ಲ, ಅವಳು ಭಗವಂತನಿಗೆ ಸಮಾನ ಎಂಬ ಉದಾತ್ತ ನಿಲುವನ್ನು ಶಿವಶರಣರು ತಳೆದಿದ್ದರು.

ಅಮೆರಿಕದಂಥ ಮುಂದುವರಿದ ದೇಶ ಕೂಡ ಇದುವರೆಗೂ ಒಬ್ಬ ಮಹಿಳಾ ಅಧ್ಯಕ್ಷರನ್ನು ಆಯ್ಕೆ ಮಾಡಲು ಸಾಧ್ಯವಾಗಿಲ್ಲ. ಆದರೆ ಭಾರತ ದೇಶ ಮಹಿಳೆಯೊಬ್ಬರನ್ನು ರಾಷ್ಟ್ರಪತಿಯಾಗಿ ಚುನಾಯಿಸಿದೆ. ಇದು ಸಾಮಾನ್ಯವಾದ ಸಾಧನೆಯಲ್ಲ. ಭಾರತದ ಇತಿಹಾಸದಲ್ಲಿ ಎಂದೂ ಮಹಿಳಾ ನಾಯಕತ್ವಕ್ಕೆ ಕೊರತೆ ಇಲ್ಲ. 12ನೆಯ ಶತಮಾನದ ಶರಣ ಚಳುವಳಿಯಲ್ಲಿ 35 ಜನ ಶರಣೆಯರು ಪಾಲ್ಗೊಂಡಿದ್ದರು ಎಂದು ನುಡಿದರು.

"ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ಸುತ್ತೂರು ಮಠದ ಉಚಿತ ಶಾಲೆಯು ಬಡ ಮಕ್ಕಳ ಬದುಕನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಈ ಸಾಲಿನಲ್ಲಿ 463 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ತೆಗೆದುಕೊಂಡಿದ್ದರು. ಇವರಲ್ಲಿ 429 ಪಾಸಾಗಿದ್ದು, ಶೇಕಡ 50.ರಷ್ಟು ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ" ಎಂದು ತಿಳಿಸಿದರು.

ವೇದಿಕೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವೆ ಕುಮಾರಿ ಶೋಭಾ ಕರಂದ್ಲಾಜೆ ಮತ್ತು ಮಾಜಿ ಉಪ ಮುಖ್ಯಮಂತ್ರಿ ಮತ್ತು ಹಾಲಿ ಶಾಸಕರಾದ ಶ್ರೀ ಸಿದ್ಧರಾಮಯ್ಯನವರು ಮತ್ತು ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಬಿ. ಸುರೇಶ್ ಅವರು ಉಪಸ್ಥಿತರಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಶ್ರೀ ಬಿ.ಎನ್. ಬೆಟ್ಕೆರೂರು ಸ್ವಾಗತ ಭಾಷಣ ಮಾಡಿದರು.

ಕಾರ್ಯಕ್ರಮದಲ್ಲಿ ಹರಗುರು ಚರಮೂರ್ತಿಗಳು, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿವರ್ಗ, ಸುತ್ತೂರು ಶಾಲೆಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿವೃಂದ, ಸುತ್ತಮುತ್ತಲಿನ ಗ್ರಾಮಸ್ಥರು ಬಹು ಸಂಖ್ಯೆಯಲ್ಲಿ ನೆರೆದು ಕಾರ್ಯಕ್ರಮ ತುಂಬ ಯಶಸ್ವಿಯಾಗಿ, ಅದ್ದೂರಿಯಾಗಿ ನಡೆಯಿತು.

ಮುಖ್ಯ ಕಾರ್ಯಕ್ರಮಗಳು ನಡೆದ ಬಳಿಕ ಪ್ರೊ. ಎಂ. ಕೃಷ್ಣೇಗೌಡ ಮತ್ತು ತಂಡದವರಿಂದ 'ನಗೆ ಉತ್ಸವ' ನಡೆಯಿತು. ಸಭೆಗೆ ಆಗಮಿಸಿದ್ದ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ಜೆಎಸ್‌ಎಸ್ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆ ಮೈಸೂರು

ಮಾರ್ಚ್ 2009ರಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶಾಲೆಯು ಗಳಿಸಿರುವ ಫಲಿತಾಂಶ ಹೀಗಿದೆ:

ಪರೀಕ್ಷೆಗೆ ಹಾಜರಾದವರು 44, ತೇರ್ಗಡೆಯಾದವರು 39, ಅತ್ಯುನ್ನತ ಶ್ರೇಣಿ 4, ಪ್ರಥಮ ಶ್ರೇಣಿ 16, ದ್ವಿತೀಯ ಶ್ರೇಣಿ 6, ತೃತೀಯ ಶ್ರೇಣಿ 13. ಶೇಕಡಾವಾರು ಫಲಿತಾಂಶ 88.64.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದವರ ವಿವರ: ಜೆ. ಆದಿತ್ಯ ಮಹಾಂತೇಶ್ ಪ್ರಭು 558, ಕೆ.ಆರ್. ವೈಷ್ಣವಿ 553, ಎಂ.ಜಿ. ತಿಲಕ್ 550, ಎಂ.ಎನ್. ಕೀರ್ತಿಕುಮಾರ್ 538.

JSS Women's College, Saraswathipuram

State Level Seminar

The Department of Microbiology organized a UGC-sponsored two-day State Level Seminar on "Recent Developments in Microbial Technology" on 5th and 6th March 2009. Dr. K. Chidananda Gowda, Former Vice-Chancellor, Kuvempu University inaugurated the Seminar and delivered the inaugural address. Dr. M.M. Shenoi, Head and Principal Scientist, Central Tobacco Research Institute, Hunsur, delivered the Keynote Address.

The Guest Speakers invited from various reputed institutes delivered highly informative talks on different areas of Microbial Technology. They were Dr. M.S. Thakur and Dr. M.C. Varadaraj, CFTRI, Mysore, Dr. Murali, DFRL, Dr. Madhuri Kulkarni, JSS Medical College, Mysore; Dr. Shishupala, Kuvempu University, Shimoga and Dr. M. Krishna Reddy, IIHR, Bangalore.

On 6th March 2009, Dr. D. Venkatesh, Director and Dean, Mysore Medical College, Mysore delivered the Valedictory Address. Prof K. Srihari, Joint Director of Collegiate Education, Mysore and Dr. Ashok Kumar, Principal, Sarada Vilas College, Mysore were the Chief Guests at the function, Prof. P. Mallikarjuna Setty, Principal of the College, delivered the Presidential Remarks and Dr. K.V. Suresh, Dean, presided over the function. Mr. M. Girish, Convenor and HOD of Microbiology, delivered the vote of thanks.

Louis Pasteur Birthday Celebration

The Deparment. of Microbiology and the Association of Microbiologists of India, Mysore Chapter, Mysore, jointly celebrated the Louis Pasteur Birthday Celebration on 27.12.2008. Louis Pasteur, who contributed immensely to the field of Microbiology, was aptly called the "Father of Microbiology".

On this occasion, a Special Lecture and Oral Presentation Competition for research scholars had been organized. Dr. Harshavardhan Batra, Additional Director,

DFRL, Mysore delivered a talk on "Career Guidance in the field of Microbiology and Biotechnology". Prof. P. Mallikarjuna Setty, Principal of the College delivered the Presidential Address. Dr. H.S. Murali, President and Dr. Jagannath, Secretary, Association of microbiologists of Indaia, Mysore, were present. Mr. M. Girish, Head of the Department of Microbiology, presided over the function.

Nameboards for Plants

The Department of Botany undertook the task of installing the nameboards for the plants around the campus on 3.4.2009. On this occasion, Mr. K.B. Sadananda, Retired Deputy Editor, Kannada Encyclopaedia, Manasa Gangotri, Mysore, Sri N.M. Shivashankarappa, Director of Horticulture, JSS Mahavidyapeetha, Prof. B. Siddaramaiah, Principal, Mandavya College, Mandya and Prof. G.K. Chandrashekarappa, Principal of the College were also present.

Seminar by Nature Club

A seminar was organized on 3.4.2009

under the banner of 'Nature Club'. Mr. K.B. Sadananda, Ret. Deputy Editor, Kannada Encyclopeadia, Manasa Gangotri, Mysore was the Guest Speaker who spoke on 'Biodiversity'. He enlighte ned the audience over the distribution of forests and also creatures like animals, birds, and fishes with the aid of beautiful slides.

Sri N.M. Shivashankarappa, Director of Horticulture, JSS Mahavidyapeetha, was the Chief Guest. He stressed on the need to conserve the nature. Prof. B. Siddaramaiah, Principal, Mandavya College, Mandya, another Chief Guest, spoke on the importance of nature and the causes of global warming. Prof G.K. Chandrashekarappa presided over the function.

□

JSS Polytechnic for Physically Handicapped, Mysore

He was speaking as the Chief Guest at the Annual Day Celebrations of JSS Polytechnic for the Physically Handicapped on 22.4.2009. He also said that there cannot be recession to healthcare industry and students who can acquire good listening, writing and typing skills have a bright future in the industry. He said that the M/s. Software paradig in india was doing over Rs.900 crore business and nearly 4,500 of its employees are engaged in developing software in UK and United States.

Prof. B. Mahananda, Deputy Director, Training & Placement, released the Polytechnic Magazine 'Project'-Mr. H.B. Basavaraju, Principal, JSS Polytechnic for Women, who presided over the function, said that the faculty members were doing good service to the students. Mr. K. Mahadevaswamy welcomed the guests. Mr. N.M. Shivakumaraswamy read the report. Mr. S. Srinath proposed vote of thanks. Mr. Nanjundaswamy, Principal, was present on the occasion.

***

Prestigious Award

Mr. A.P. Prathosh, student of 3rd Semester BE (E&C). has been selected as a Fellow in engineering stream under the Kishore Vaigyanik Protsahan Yojana (KYPY 2008). He is selected as one of the ten students selected in this national level selection (among the 150 students participated). Dr. C.S. Yogananda, Professor & Head of the Dept. of Mathematics has guided him for this scholarship.

This fellowship is effective from 1st April 2009 upto Pre- Ph.D. level. As a token of encouragement, a sum of Rs. 5,000/-per month till he reaches the Pre-Ph.D. level and a contingency grant of Rs.20,000/ per year is to him sanctioned from the organization. This is a prestigious award for a student of engineering stream and Mr. Prathosh has been given permission to work in any National Laboratories under HRD and DST etc.

ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾಜ್ಯಮಟ್ಟದ ವಿಚಾರಸಂಕಿರಣದ ಉದ್ಘಾಟನಾ ಸಮಾರಂಭದಲ್ಲಿ ವಿಶ್ರಾಂತ ಕುಲಪತಿಗಳಾದ ಡಾ. ಕೆ. ಚಿದಾನಂದಗೌಡ ಅವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಪಿ. ಮಲ್ಲಿಕಾರ್ಜುನ ಶೆಟ್ಟಿಯವರು

ಜೆಎಸ್‌ಎಸ್ ವಿಭಿನ್ನ ಸಮರ್ಥರ ಪಾಲಿಟೆಕ್ನಿಕ್‌ನಲ್ಲಿ 'ಪ್ರಾಜೆಕ್ಟ್-ಡಿ' ವಾರ್ಷಿಕ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಚಿತ್ರದಲ್ಲಿ ಶ್ರೀ ಬಿ. ಮಹಾನಂದ, ಶ್ರೀ ಎಚ್.ಬಿ. ಬಸವರಾಜು, ಶ್ರೀ ನಂಜುಂಡಸ್ವಾಮಿ ಮತ್ತು ಶ್ರೀ ಚಂದ್ರಶೇಖರ್

ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆಯು ತನ್ನ ಸಹಯೋಗ ಸಂಸ್ಥೆಗಳಾದ ಸಮತಾ ಅಧ್ಯಯನ ಕೇಂದ್ರ ಹಾಗೂ ಶಕ್ತಿಧಾಮದ ಆವರಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿತು. ಚಿತ್ರದಲ್ಲಿ ಶ್ರೀಮತಿ ಚಿತ್ರಾ ಶೆಣೈ, ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಎಸ್. ಪರಶಿವಮೂರ್ತಿ, ಶ್ರೀ ಬಿ.ಎನ್. ಬೆಟ್ಕೆರೂರ್, ಲೇಖಕಿ ಡಾ. ವಿಜಯಾ ದಬ್ಬೆ ಮತ್ತು ಶ್ರೀ ಚನ್ನಬಸಪ್ಪನವರು

ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಸುತ್ತೂರು ಶ್ರೀಕ್ಷೇತ್ರದಲ್ಲಿ ಜರುಗಿದ ಚಾಕಿ ಹುಳು ಸಾಕಾಣಿಕೆ ಮತ್ತು ಆಹಾರ ಸಂಸ್ಕರಣಾ ತರಬೇತಿ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಡಾ. ರಾಜೇಂದ್ರಸಿಂಗ್ ಪರೋಡರವರು ಜ್ಯೋತಿ ಬೆಳಗುತ್ತಿದ್ದಾರೆ. ಚಿತ್ರದಲ್ಲಿ ಡಾ. ಜೆ.ಎಚ್. ಕುಲಕರ್ಣಿ, ಪೂಜ್ಯ ಶ್ರೀಗಳವರು, ಡಾ. ಎಸ್. ಪ್ರಭುಕುಮಾರ್, ಶ್ರೀ ವಿ. ಪ್ರಕಾಶ್, ಪ್ರೊ. ಪಿ.ಜಿ. ಚೆಂಗಪ್ಪ, ಶ್ರೀ ಎನ್.ಎಸ್. ಮಹದೇವಯ್ಯ ಮತ್ತು ಇತರ ಗಣ್ಯರು

ಬೆಂಗಳೂರು ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪಂಪ ಪ್ರಶಸ್ತಿ ಪುರಸ್ಕೃತ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ ಯವರನ್ನು ಶ್ರೀ ಎಸ್.ಬಿ. ಮುದ್ದಪ್ಪನವರು ಗೌರವಿಸಿದರು. ಚಿತ್ರದಲ್ಲಿ ಪ್ರಾಂಶುಪಾಲರಾದ ಶ್ರೀಮತಿ ಕೆ.ಎಂ. ಇಂದಿರಾ, ಶ್ರೀಮತಿ ವಿನಯಾ ಪ್ರಸಾದ್, ಕು. ಎಸ್. ದೀನಾ ಮತ್ತು ಕು. ಆರ್. ಉಷಾ ಅವರುಗಳಿದ್ದಾರೆ

ಆಸ್ಕರ್ ಪ್ರಶಸ್ತಿ ವಿಜೇತ ಶ್ರೀ ಆರ್. ವಿಜಯ ಪ್ರಕಾಶ್ ಮತ್ತು ತಂಡದವರು ಸುತ್ತೂರು ಶ್ರೀಮಠದಲ್ಲಿ ಬೆಳದಿಂಗಳ ಸಂಗೀತ ಕಾರ್ಯಕ್ರಮವನ್ನು ನೀಡುತ್ತಿರುವುದು

ಸಂಪಾದಕ: ಆರ್.ಎಸ್. ಪೂರ್ಣಾನಂದ
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 2548211, 2548212 ಫ್ಯಾಕ್ಸ್: 2548218 e-mail: jsspbln@yahoo.com ಮುದ್ರಣ: ಭಾಸ್ಕರ್ ಪ್ರಿಂಟರ್ಸ್, ಮೈಸೂರು